Cement concreting the Bazaar Road of Arsikere.

Q.—651. Sri K. PANCHAKSHARIAH (Arsikere).—

Will the Government be pleased to state :—

(*a*) (i) the amount of the estimate for cement concreting the bazaar road of Arsikere ; (ii) rate at which the work is undertaken ; (iii) when the estimate was prepared ; (iv) whether the P.W.D. had been requested to take up this work ; (v) whether the P.W.D. have agreed ;

(*b*) (i) when the contract was given for this work ; (ii) whether tenders were called ; (iii) if not, the basis on which and the rate at which this was given ;

(*c*) whether the Municipality had deposited the amount of the estimate with the P.W.D. even before the commencement of the work ; if not, the amount that had been deposited ;

(*d*) whether the necessary administrative and technical sanction for this work has been obtained ?

A.—Sri Kaddal MANJAPPA (Minister for Revenue and Public Works).—

(*a*) (i) Rs. 14,400.
(ii) At sanctioned rates.
(iii) In December 1953.
(iv) Yes.
(v) Yes.

(*b*) (i) January 1954.
(ii) No.
(iii) At sanctioned rates.

(*c*) Rs. 7,080 about 5 to 6 years back and Rs. 2,500 subsequently.

(*d*) Yes.

BUDGET FOR 1955-56—DEMANDS FOR GRANTS

Mr. SPEAKER.— Now, we have 5 Demands today ; three of them relate to Industries and Sericulture and two of them relate to Road Transport. Therefore, I want the opinion of the House whether we can allot the whole day for Industries or apportion the time between Road Transport and Industries. Many members came and requested me to allot some time also for the Road Transport ; therefore I am requesting the House to give its opinion in this matter.

Sri J. MOHAMED IMAM (Jagalur).— One hour for Road Transport and the rest for Industries may be devoted. . .

ಶ್ರೀ ಎಸ್. ಗೋಪಾಲಗೌಡ (ನಾಗರ—ಹೊಸನಗರ).—Road Transport ವಿಷಯವನ್ನೂ ಕೂಡ Industries ಮೇಲೆ ಮಾತನಾಡುವಾಗ ಹೇಳಬಹುದು. ಆದ್ದರಿಂದ General Discussionಗೆ ಅವಕಾಶ ಕೊಟ್ಟರೆ ಒಳ್ಳೆಯದು. ಆಗ Sericulture, Industries, Road Transport—ಮೂರರ ಮೇಲೆಯೂ ಮಾತನಾಡಬಹುದು.

Mr. SPEAKER.—Those are two different items. Therefore we may allot some time to Road Transport also.

ಶ್ರೀ ಟಿ. ಎಸ್. ಮೂಡಲಗಿರಿಗೌಡ (ಕುಣಿಗಲ್) —ಹೌದು ; ಎರಡನ್ನೂ ಒಟ್ಟಿಗೆ club ಮಾಡುವುದು ಕ್ಲಾಗುವುದಿಲ್ಲ. ಎರಡಕ್ಕೂ ಬೇರೆ ಬೇರೆ ಅವಕಾಶ ಕೊಡಬೇಕು.

Mr. SPEAKER.—I quite agree with the Hon'ble Member. Road Transport is quite different from Industries. Can I allot one hour for Road Transport and the rest for Industries ?

MEMBERS.—Yes.

Sri H. SIDDAVEERAPPA (Minister for Home and Industries).—I request you to kindly let me know now alone the time that will be allotted for replies so that I may adjust accordingly. To reply to the debate on both the demands, one hour may not be sufficient.

Mr. SPEAKER.— I want to bring to the notice of the Hon'ble Members that to-day at 5 o'clock all the demands have to be closed. Therefore no extra time will be given. What is the time required by the Hon'ble Minister to reply ?

Sri J. MOHAMED IMAM.—I find, Sir, from the proceedings, the Ministers have been taking usually very long time to reply—sometimes they take one hour. I suggest about 20 minutes may be allowed to the Minister to reply.

Mr. SPEAKER.—Sometimes what happens is this : unless the Ministers effectively reply to the criticisms or statements made by the members, some of them go unanswered. It may create a misapprehension in the minds of the public if the points raised are not replied effectively. Therefore I want the Government to give effective replies to the statements made by the members.

Sri J. MOHAMED IMAM.—It all depends upon the manner in which they reply.

Sri H. SIDDAVEERAPPA.—Yesterday one member took two hours. How can we reply within 20 minutes ?

Mr. SPEAKER.—So, shall I allot half an hour for the reply in respect of Industries ?

Sri H. SIDDAVEERAPPA.—I want 40 minutes for Industries and 20 minutes for Road Transport, Sir.

Sri K. HANUMANTHAIYA (Leader of the House).—There are two aspects; one is, members should also feel satisfied that Government have met the points that they have raised ; and secondly, the criticisms that are made on the floor of this House, if they go unanswered, as you said, would create a wrong impression in the country. Therefore, it is impossible to restrict the time to be allotted to the Minister. All that can be done is, you may allot time for members and at a certain stage the discussion should be closed and the Government may be allowed to reply.

DEMAND No. 26.—INDUSTRIES AND SUPPLIES.

43. INDUSTRIES AND SUPPLIES (EXCEPT SERICULTURE).

Mr. SPEAKER.—Now I will move the Demand No. 26.

The motion moved :

"That a sum not exceeding Rs. 6,58,71,800 be granted to the Government to defray the charges which will come in course of payment during the year ending 31st day of March 1956 in respect of Industries and Supplies except Sericulture."

Hon'ble Members can speak on all the three demands, that is, Demands Nos. 26, 27 and 41. I may remind them in view of restricted time to-day, I cannot extend the debate even one minute after 5 o'clock. I request the Hon'ble Members to cut short their speeches.

Sri A. BHEEMAPPA NAIK (Molakalmuru).—Some upper-limit will have to be fixed in the case of Opposition. In the case of others some time-limit has to be fixed. Otherwise what happens is, one or two members will take all the time and the rest of us will have to go home without speaking.

Mr. SPEAKER.—To-day I will allot not more than 5 minutes because I see a large number of Members want to speak.

Sri J. MOHAMED IMAM.—We can continue till 3 o'clock. We have got 120 minutes. We can allow 12 members to speak at the rate of 10 minutes each.

Mr. SPEAKER.—At that rate, how many members can speak ?

Sri A. BHEEMAPPA NAIK.—Five minutes will be quite all right, Sir. It would be a different thing if the leader of the Opposition is given a little concession. As regards others, it is better to give 5 minutes each.

Mr. SPEAKER.—That is correct.

*Sri S. SRINIVASA IYENGAR (T.-Narasipur).—Sir, I oppose the Demand. The Sericulture Industry is an important cottage industry in Mysore State. Mysore has progressed very much in Sericulture. Prior to 1875, India was an exporting country, but today it is an importing country. We produce a quantity that falls short of our requirements. That is our position after nearly 80 years Sericulture Industry as applied to T.-Narasipur Taluk is quite different from the rest of India. In T.-Narasipur Taluk 7 factories have been established. A joint stock company called the Silk Filature, Ltd., T.-Narasipur, has developed not because it was wanted but because the Government of India and the Government of Mysore have had to expand it because the Government of India wanted it to be done because the United Kingdom wanted the manufacture of parachute silk and therefore the expansion was there. Whatever may be the cause, anyway the silk industry has developed very well in T.-Narasipur Taluk. The T.-Narasipur Silk Filature, Ltd. employs 1,000 workers as was disclosed by the Hon'ble the Minister and

(SRI S. SRINIVASA IYENGAR.)

the Government Silk Filature, Kanakapura employs a fairly large number. For the last four years, the Kanakapura Silk Filature has lost nearly 5·6 lakhs of rupees; while in the said period the T.-Narasipur Silk Filature has lost not more than 1·88 lakhs. In this period, T. Narasipur has produced much more than what the Kanakapura Silk Filature has produced. The disease, as stated by the Hon'ble the Minister, may not be there. Taking that factor in view, it is not a sick industry; it is a live industry. The Government of Mysore have expanded their Bhadravati Works and other industrial concerns and this industry is surviving mainly on the aid received by the Government and the Government have attached certain conditions. The conditions are: that the management should be handed over to the directorate. The Government adviser is in charge of that industry. If this industry is a sick industry, as considered by the Minister, it is not because of the unwillingness on the part of the workers and the company; it is because of the shortage in the working capital. I place before the Minister the feeling of a large number of people who are depending on that industry; he can kindly extend the same hand of cooperation or aid to this factory too. By closure of this factory, not only the thousand people will be thrown out of employment but 55 families of T.-Narasipur Taluk would be affected.

Sir, out of 1·1 lakhs acreage under mulberry nearly 80,000 acres have been brought under cultivation in T.-Narasipur Taluk. I think the Hon'ble the Minister will kindly see the force of my argument if I say that this industry plays a vital role in T.-Narasipur Taluk; whatever may be the mistakes or omissions of the Joint Stock Company, it should not reflect on the life of the people. I regret very much for the replies given by the Hon'ble the Minister when he said that he sympathised with the case of those thousand people who would be thrown out of employment. Is it the policy that the popular Government should adopt, Sir? It may be true that the working of the industry by a private company might result in throwing out those people. But I appeal to Government in the interest of those people and it is the duty of the Government to give them some protection. That is my prayer. We are planning in the First Year Plan and in the Second Five-Year Plan for more employment. But here is a case of the employed being thrown out of employment and the Government are saying that they have nothing to do with the plight of those people. I hope, Sir, that the Government will certainly come to the rescue of these people.

Secondly, Sir, in reply to the question, the Government were pleased to say that the Central organisation for the marketing of silk would be tapped. The Government of India have given certain grants to that institution and I do not know when that institution will come into being. I do not know whether it has been established so far. The worst thing the Sericulture industry has experienced today in T.-Narasipur is the instability in prices. The raiyat has to market it by bringing it to Bangalore. In Bangalore, marketing is in the hands of private people who quote their own rates. The purchaser has no control over the silk he purchases. Sir, so far as this Silk Filatures, Ltd., is concerned, at the time of taking over from the Joint Stock Company, the Government nominated a directorate. Even now it is not too late; it is not a sick institution; Government can certainly pull up a particular director and see that the work is continued without stop.

Next I would deal about the establishment of a Sugar Factory at Bannur. Bannur is having nearly 1 ,000 acres of wet land. Majority of the people raise sugarcane crop in that area. They find it hard to market the crop. The price of jaggery is going down. Just to safeguard their interest, I request the Government to give encouragement for starting of a Co-operative Sugar Factory at Bannur.

Sir, very recently the distribution of cement has been controlled. In Mysore, for building purposes the quantity of cement has been raised to ten times.

The applications are received for ten times the fixed quantity. It has become very hard to get the cement and I am told that cement is available in the factory, but they are suffering from shortage of waggons. I request the Government at least to take such of those actions as are necessary to ease the situation.

In industrial concerns there seems to be a defect in taking stocks. The stocks that are being displayed in the balance sheet do not seem to reveal the real worth. The Auditor General in the Appropriation Accounts, 1951-52 and the Audit Report of 1953, has made the following observations, on page 155 :

> " The system of stock taking at the close of each year and the valuation of closing stock at the lesser of the cost or market price was not followed in most of the concerns. The value of the closing stock shown in the *pro forma* account of such concerns represented the balance in the General Ledger without reference to the details of stock items actually held at the close of the year and their value at the lesser of the cost or market price."

I would like to know whether a different procedure has been established or has been introduced in these industrial concerns. If not, it is very necessary that we should examine this issue and change the system. The Minister was pleased to say that he would go to any extent in running factories where there are meant solely for the good of the people. When he said this, I drew his attention to the loss in the Kankanhalli Filatures. He may view the position of the Silk Filatures, Ltd., T.-Narasipur the same way and take it over to Government and see that the interests of the people are safeguarded. Many of the industrial concerns managed by the Government are not in a position to market the goods that they are manufacturing. Large stocks are held in the Stores. Yesterday, I placed before the Government the position in the Government Silk Weaving Factory. The statements given in the Audit Report go to show that such large stocks are built up in almost every concern. In Industrial works, there is stock to the extent of nearly rupees one crore. Such huge stocks are built up by these concerns because they are unable to sell all the products or some restrictions are imposed. So it restricts the fluid resources of the State. In the Iron and Steel Works, Mysore Silk Filatures, Sandal Oil Factory, etc., large stocks are held. There is every danger in holding such large stocks. It is possible that the price may go down. In that case, the Government will sustain very heavy loss. If there is rise in price, certainly they could make profit, but the holding of stock must be under control. Certain amount of stock must be held. That is true, but it must be limited. It is best that we organise the net work of marketing throughout India. I do not think we are doing it in an organised way. I therefore urge that such marketing is done. Much has been said about the agency of the Sandal Oil Factory in the Upper House last year. Sri Gopalakrishna Setti had said about it. The Hon'ble the Minister replied to it. We are paying so much of commission to so many agents throughout India. I think it will not cost us too much if we organise sales depots in most of the important cities in India and also in some of the most important parts outside India. I, therefore, submit that the industrial concerns of the State should be run on business lines The system of accounting that we have today does not give us a correct picture of the working of the industrial concerns as it stands, say in the year 1953-54 or 1954-55. The Audit Report gives accounts of the 1951-52 period. It would be absurd on our part to speak on the report of 1951-52. Previously, prior to the integration, the Budget used to take the net receipt from the working of these industrial concerns. The Budget also used to give a comparative view about the working of these concerns. We are under a handicap. We have no report about the working of these institutions barring the recent review of the industrial concerns supplied by the

(SRI S. SRINIVASA IYENGAR.)

Government of Mysore. I want to impress on the Government whether it would be possible for them to revert to the original method of giving us a report on the working of the industrial concerns along with the Budget so that we could have a correct picture of the closing and opening stocks or the profit and loss accounts of the concerns.

Lastly, about the Finance Corporation which is to be constituted. I want to know whether the Government has taken any action towards that. A detailed note on the position of the State in respect of the Finance Corporation would go a long way to supply finance to so many industries of the State. Thank you.

*ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).— ಸ್ವಾಮಿ, ಕೈಗಾರಿಕಾ ಸಾಮಾನು ಸರಬರಾಯಿಗಳಿಗೆ ಸಂಬಂಧಪಟ್ಟ ಈ ಡಿಪಾರ್ಟ್‌ಮೆಂಟ್ ಮನವಿಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತ, ಈ ಸಂದರ್ಭದಲ್ಲಿ ಒಂದೆರಡು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಲು ಅಪೇಕ್ಷಿಸುತ್ತಿದ್ದೇನೆ.

ನಾನು ಈ ಮನವಿಯ ಸಂಬಂಧದಲ್ಲಿ ಕಾರ್ಮಿಕ ವರ್ಗಕ್ಕೆ ಸಂಬಂಧಪಟ್ಟಹಾಗೆ ಎರಡು ಪ್ರೋತ್ಸಾಹನೆಗಳನ್ನು ಕಳುಹಿಸಿದ್ದೆನು. ಅವುಗಳು ಈಗ ಈ ಪ್ರೋತ್ಸಾಹನೆಗಳ ಪಟ್ಟಿಯಲ್ಲಿ ಅಡಕವಾಗಿವೆ. ಆದರೆ ಈಗಾಗಲೇ ಮಾನ್ಯ ಮಂತ್ರಿಗಳು ಕಾರ್ಮಿಕರಿಗೆ ನ್ಯಾಯವಾಗಿ ಸಲ್ಲತಕ್ಕಂಥ ಬೇಡಿಕೆಗಳೇನಿರುತ್ತವೆಯೋ ಅವುಗಳನ್ನೆಲ್ಲಾ ಪರಿಶೀಲನೆ ಮಾಡತಕ್ಕ ಬಗ್ಗೆ ಒಂದು ತೃಪ್ತಿಪಕ್ಷದ ಸಮ್ಮೇಳನವನ್ನು ಏರ್ಪಡಿಸಿ ತನ್ಮೂಲಕ ಒಂದು ಶಾಂತಿಯುತವಾದ ವಾತಾವರಣವು ಈ ಭಾಗದಲ್ಲಿ ಏರ್ಪಡುವ ಹಾಗೆ ಮಾಡುತ್ತೇವೆಂದು ಭರವಸೆ ಕೊಟ್ಟಿದಾರೆ. ಅದುದರಿಂದ ಸಾನೀಗ ಇದರ ಬಗ್ಗೆ ಅಷ್ಟು ಹೆಚ್ಚು ಪ್ರಸ್ತಾಪಮಾಡುವುದಕ್ಕೆ ಹೋಗುವುದಿಲ್ಲ. ನಾನು ಈ ಕಾರ್ಮಿಕರಿಗೆ ಅಗಾಗ್ಗೆ ಆಕಸ್ಮಿಕವಾಗಿ ಸಂಭವಿಸತಕ್ಕಂಥ ತೊಂದರೆ ಮತ್ತು ಅಪಘಾತಗಳನ್ನು ನಿವಾರಣೆ ಮಾಡತಕ್ಕ ಬಗ್ಗೆ ಅವರಿಗೆ ಸಾಲದ ಸೌಲಭ್ಯಗಳನ್ನೊದಗಿಸಲು ಕೆಲವು ಸಹಕಾರ ಬ್ಯಾಂಕುಗಳನ್ನು ಅಲ್ಲಲ್ಲೇ ಏರ್ಪಾಡುಮಾಡಿ ಕೊಡಬೇಕೆಂದು ಮತ್ತೊಂದು ಸೂಚನೆಯನ್ನೂ ಸಹ ಕಳಿಸಿದ್ದೆ. ಈ ದಿವಸ ಇವರಿಗೆ ಈ ಪ್ರಾವಿಡೆಂಟ್ ಫಂಡ್, ಗ್ರಾಚ್ಯುಯಿಟಿ ಇತ್ಯಾದಿ ಸೌಕರ್ಯಗಳು ಯಾವೂ ಇರುವುದಿಲ್ಲ. ಹೀಗಾಗಿ ಇವರಿಗೆ ಸುಲಭವಾಗಿ ಸಾಲ ತರಲು ಯಾವ ಮಾರ್ಗಗಳೂ ಇಲ್ಲದಂತಾಗಿ ಆಯಾ ಊರುಗಳಲ್ಲೇ ಇರತಕ್ಕಂಥ ಮಾರ್ವಾಡಿಗಳಲ್ಲಿ ಮತ್ತು ಪಠಾಣರಲ್ಲಿ ಇವರು ಹೋಗಿ ಸಾಲ ತಂದು ವಿಪರೀತ ಕಷ್ಟನಷ್ಟಗಳಿಗೀಡಾಗುತ್ತಿದ್ದಾರೆ. ಈ ದಿವಸ ಅವರಿಗೆ ಈ ಬಡಪಾಯಿಗಳು ಅಗಾಧವಾದಂಥ ಬಡ್ಡಿ ತೆರಬೇಕಾಗಿದೆ. ಈ ಅಗಾಧವಾದ ಬಡ್ಡಿ ತೆತ್ತೂ ತೆತ್ತೂ ಅವರೆಲ್ಲರೂ ಹಾಳಾಗಿ ಹೋಗುತ್ತಿದ್ದಾರೆ. ಇದನ್ನು ಪರೀಕ್ಷೆ ಮಾಡಬೇಕಾದರೆ ಈ ಕಾರ್ಮಿಕರಿಗೆ ವರ್ಷದಲ್ಲಿ ಅಗಾಗ್ಗೆ ಬೋನಸ್ ಡಿವಿಡೆಂಡ್ ಇತ್ಯಾದಿಗಳನ್ನು ಹಂಚಿಕೆ ಮಾಡತಕ್ಕ ದಿವಸ ತಾವು ಬಂದು ನೋಡಬಹುದು. ಆ ದಿವಸ ಆ ಕಾರ್ಮಿಕರಿಗೆ ಕೊಡತಕ್ಕಂಥ ಹಣವೆಲ್ಲಾ ಆ ಮಾರ್ವಾಡಿಗಳ ಮತ್ತು ಪಠಾಣರ ಅಂಗಡಿಗಳಿಗೆ ಹೋಗತಕ್ಕದಾಗಿರುತ್ತದೆ. ಆ ಅಂಗಡಿಗಳಲ್ಲಿ ಇವರ ಲೆಕ್ಕಾಚಾರಗಳು ಇಡೀ ರಾತ್ರಿಯೆಲ್ಲಾ ಆಗುತ್ತಿರುತ್ತವೆ. ಈ ಅಂಶಗಳನ್ನೆಲ್ಲಾ ತಾವು ಇಷ್ಟಪಟ್ಟರೆ ಕಣ್ಣಾರೆ ನೋಡಬಹುದು. ಇದನ್ನು ತಾವು ಸರ್‌ಪ್ರೈಸ್ ಆಗಿ ಬಂದು ಬೇಕಾಗಿದ್ದರೆ ಚೆಕ್‌ಮಾಡಿ ನೋಡಬಹುದು. ಆಗ ತಮಗೆ ಈ ದಿವಸ ಅವರಿಗೆ ಎಷ್ಟೊಂದು ತೊಂದರೆಯಾಗುತ್ತಿದೆ ಎನ್ನತಕ್ಕದ್ದು ಗೊತ್ತಾಗುತ್ತದೆ. ಆದಕಾರಣ ಈ ತೊಂದರೆಗಳನ್ನೆಲ್ಲಾ ತಪ್ಪಿಸುವ ಸಲುವಾಗಿ ಈಗ ಈ ಕಾರ್ಮಿಕರಿಗೆ ಕೊಡಲಾಗುತ್ತಿರುವ ಡಿವಿಡೆಂಡ್, ಬೋನಸ್ ಇತ್ಯಾದಿ ಮೊಬಲಗಿನಲ್ಲಿ ಒಂದು ಕೊಂಚ ಭಾಗವನ್ನು ತೆಗೆದಿಟ್ಟು—ಅದಕ್ಕೆ ಸರ್ಕಾರದವರು ಮತ್ತಷ್ಟು ಹಣವನ್ನು ಹಾಕಿ ಒಂದೊಂದು ಕ್ರೆಡಿಟ್ ಬ್ಯಾಂಕುಗಳನ್ನು ಅಲ್ಲಲ್ಲೇ ಏರ್ಪಾಡುಮಾಡಿ ತನ್ಮೂಲಕ ಈ ಕಾರ್ಮಿಕರಿಗೆ ಹೀಗೆ ಆಗಾಗ್ಗೆ ಒದಗಬಹುದಾದಂಥ ತೊಂದರೆಗಳನ್ನು ನಿವಾರಣೆ ಮಾಡಬೇಕಾದದ್ದು ತೀರ ಅಗತ್ಯವಾದದ್ದು ಎನ್ನತಕ್ಕಂಥ ವಿಚಾರ ಒಂದನೆಯದು.

ಇನ್ನು ಎರಡನೆಯ ದಾಗಿ ಈಗ ಸರ್ಕಾರದವರು ಎಲ್ಲೆಲ್ಲಿ ಈ ಕೈಗಾರಿಕಾ ಕಾರ್ಖಾನೆಗಳನ್ನು ತೆರೆದಿದ್ದಾರೋ ಅಲ್ಲೆಲ್ಲಾ ಇರತಕ್ಕಂಥ ದೈವದತ್ತವಾದಂಥ ಪ್ರಕೃತಿ ಸೌಂದರ್ಯಗಳೇನಿರುತ್ತವೆಯೋ ಅವುಗಳನ್ನು ಕೆಡದಂತೆ ಕಾಪಾಡಿಕೊಂಡು ಬರಬೇಕೆಂಬುದು ಮತ್ತೊಂದು ಮುಖ್ಯವಾದ ವಿಚಾರವಾಗಿದೆ. ಭದ್ರಾವತಿ ಬಳಿಯಲ್ಲಿ ಭದ್ರಾನದಿ ಹರಿಯುತ್ತಿದೆ. ಪೇಪರ್ ಮಿಲ್ ಮತ್ತು ಸಿಮೆಂಟ್ ಮಿಲ್ ಇತ್ಯಾದಿಮೆಷಿನರಿಗಳ ಭಾಗದಲ್ಲಿ ಬರತಕ್ಕ ಕೆಟ್ಟ ನೀರೆಲ್ಲ ವನ್ನೂ ಆ ನದಿಗೆ ಬಿಟ್ಟುಬಿಡಲಾಗುತ್ತಿದೆ. ಹೀಗಾಗಿ ಆ ನದಿಯ ನೀರೆಲ್ಲಾ ಕೆಟ್ಟುಹೋಗಿ ಜನಗಳಿಗೆ ತುಂಬ ಕೆಡುಕುಂಟಾಗುತ್ತಿದೆ. ನದಿಯಲ್ಲಿರತಕ್ಕಂಥ ಅನೇಕ ಜಲಚರಗಳೂ ಕೂಡ ನಶಿಸುತ್ತ ಹೋಗುತ್ತಿವೆ. ಭದ್ರಾವತಿಯಲ್ಲಿರತಕ್ಕಂಥ ಜನರ ಆರೋಗ್ಯ ಕೆಟ್ಟಿರುವುದು ಒಂದು ಕಡೆಗಿರಲಿ, ಭದ್ರಾವತಿಯಿಂದ ಮುಂದಕ್ಕೆ ಈ ನದಿ ಹರಿಯುವಂಥ 25-30 ಮೈಲಿಗಳವರೆಗೂ ಆ ನದಿಯ ಅಕ್ಕಪಕ್ಕದ ಗ್ರಾಮಗಳ ಜನರ ಆರೋಗ್ಯ ಸಹ ಕೆಟ್ಟು, ಹೋಗಿ ಅವರಿಂದ ತುಂಬ ದೂರುಗಳು ಬರುತ್ತಿವೆ. 25-30 ಮೈಲಿಗಳವರೆಗೂ ಜನಗಳು ಯಾರೂ ಈ ನದಿಯ ನೀರನ್ನು ಬಳಸುವುದಕ್ಕೆ ಆಗುತ್ತಿಲ್ಲ. ಹೀಗಾಗಿ ಪೌರ ನಭೆಯವರಿಗೆ ಈ ಸಂಬಂಧವಾಗಿ ನಾನಾ ಕಡೆಗಳಿಂದ ಅನೇಕ ದೂರುಗಳು ಅನೇಕ ದಿವಸಗಳಿಂದಲೂ ಬರುತ್ತಲೇ ಇವೆ ಆದರೆ ಈಗ್ಗೆನೋ ಆ ಪೌರ್ಸಭೆಯವರು ಈ ಕಾರ್ಖಾನೆಯವರಿಗೆ ಒಂದೆರಡು ಸಾವಿರ ರೂಪಾಯಿಗಳ ಪರಿಹಾರವನ್ನು ಈ ಬಗ್ಗೆ ಕೊಡಬೇಕೆಂದು ಕೇಳಿದ್ದಾರಂತೆ. ಉತ್ತರ ಇಂಡಿಯಾದಲ್ಲಿ ಒಂದು ಕಡೆ ಹೀಗೆ ಆಕಾಯು ಸಂಭವಿಸಿದಂಥ ಸಂದರ್ಭದಲ್ಲಿ ಜನರು ಕೋರ್ಟಿಗೆ ಹೋಗಿ ಅಲ್ಲಿನತನಕ ವ್ಯಾಜ್ಯ ಮಾಡಿ ಕೊನೆಗೆ ಆ ಕಾರ್ಖಾನೆಯನ್ನೇ ಮುಚ್ಚಿಸಿಬಿಡುವಂತೆ ಕೋರ್ಟಿನ ತೀರ್ಪನ್ನು ತಂದಿದ್ದಾರೆಂದು ನಾನು ಕೇಳುತ್ತೇನೆ. ಆದರೆ ಈ ದಿವಸ ನಮ್ಮಲ್ಲಿ ಜನರಿಗೂ ನ್ಯಾಯಸ್ಥಾನದ ಮಟ್ಟಿಗೆ ಹೋಗಲು ಮನಸು ಮಾಡಿಲ್ಲ. ಏನೇ ಆಗಲಿ ಹೀಗೆ ಹಾಲ ನಡೆಯುತ್ತಿರುವ ಕೈಗಾರಿಕಾ ಕ್ಷೇತ್ರಗಳ ಅಭಿವೃದ್ಧಿಯ ವಿಷಯದಲ್ಲಿ ದೈವದತ್ತವಾದಂಥ ಸೌಲಭ್ಯಗಳೇನಿರುತ್ತವೆಯೋ ಅವುಗಳಿಗೆ ಯಾವ ಅಡ್ಡಿ ಆಡಚಣೆಯೂ ಬಾರದಂತೆ ನೋಡಿಕೊಳ್ಳಲು ಸರ್ಕಾರದವರು ತಮ್ಮ ತೀವ್ರ ಗಮನವನ್ನು ಇತ್ತಕಡೆಗೆ ಕೊಡಬೇಕೆಂದು

ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇದು ವಿಜ್ಞಾನ ಯುಗ. ಯಾವುದನ್ನೂ ಕೂಡ ಅಸಾಧ್ಯ ಎಂದ ಹೇಳುವುದಕ್ಕಾಗುವುದಿಲ್ಲ. ಅದುದರಿಂದ ಇನ್ನು ಮುಂದಕ್ಕೆ ಸರ್ಕಾರದವರು ಈ ಬಾಬಿನ ಕಡೆಗೆ ತಮ್ಮ ಹೆಚ್ಚಿನ ನಿಗಾ ಕೊಡುವುದರ ಜೊತೆಗೆ ಆ ಕಾರ್ಖಾನೆಗಳಿರುವ ಪ್ರದೇಶದ ಜನರ ಆರೋಗ್ಯದ ಕಡೆಗೆ ಹೆಚ್ಚಿನ ನಿಗಾ ವಹಿಸತಕ್ಕ ಬಗ್ಗೆ ಹೆಚ್ಚು ಹಣವನ್ನು ಸರಬರಾಯಿ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಮೂರನೆಯದಾಗಿ, ಈ ದಿವಸ ದಕ್ಷತೆಯಿಂದ ಕೆಲಸಕಾರ್ಯಗಳನ್ನು ನಡೆಸುತ್ತಿರುವಂಥ ಕಾರ್ಮಿಕರಿಗೂ ಮತ್ತು ನೌಕರರಿಗೂ ಸರ್ಕಾರದವರು ಸಾಕಷ್ಟು ಉತ್ತೇಜನಗಳನ್ನಾಗಲಿ ಅಥವಾ ಯಾವ ಒಂದು ಪ್ರೋತ್ಸಾಹವನ್ನಾಗಲಿ ನೀಡುತ್ತಿಲ್ಲ. ಈ ಬಾರಿಯೂ ಕೂಡ ಸರ್ಕಾರದವರು ಹೆಚ್ಚಿನ ನಿಗಾ ಕೊಡಬೇಕೆಂದು ಹೇಳುತ್ತೇನೆ. ಆದರೆ ತಾವು ಹೀಗೆ ದಕ್ಷತೆಗೆ ಪುರಸ್ಕಾರವನ್ನು ಕೊಡದೆಹೋದರೆ ಆ ಕಾರ್ಖಾನೆಗಳೆಲ್ಲಾ ನಿಂತೇ ಹೋಗುತ್ತವೆಂದೇನೂ ನಾನು ಹೇಳುತ್ತಿಲ್ಲ. ಆದರೆ ಅವುಗಳು ಕೆಲಸ ನಡೆಸುತ್ತಿದ್ದಾಗ್ಯೂ ಅವುಗಳ ಅಭಿವೃದ್ಧಿಗೆ ಕುಂದಕ ಬರುತ್ತದೆ ಎಂದು ಮಾತ್ರ ಹೇಳುತ್ತೇನೆ.

ಇನ್ನು ಆ ಕೆಟ್ಟ ನೀರನ್ನೆಲ್ಲಾ ನದಿಗೆ ಬಿಟ್ಟುಬಿಡುತ್ತಿರುವುದರಿಂದ ಆ ನೀರನ್ನು ಕುಡಿಯುವಂಥ ಕಾರ್ಮಿಕರಿಗೆಲ್ಲಾ ಹೊಸ ಹೊಸ ಕಾಯಿಲೆಗಳು ಪ್ರಾರಂಭವಾಗಿವೆ. ಅದುದರಿಂದ ಆ ಪ್ರದೇಶದಲ್ಲಿ ಈ ಕಾರ್ಮಿಕರಿಗೆ ಹೆಚ್ಚಿನ ವೈದ್ಯ ಸೌಲಭ್ಯಗಳು ದೊರೆಯುವಂತಾಗಬೇಕು. ಅಲ್ಲಿ ಯಾವ ವೈದ್ಯರೂ ಬಂದು ಆ ವಿಚಾರಗಳನ್ನೆಲ್ಲಾ ಪರೀಕ್ಷಿಸಿ ನೋಡುತ್ತಿಲ್ಲ. ಈ ವಿಚಾರಕ್ಕೆ ಸರ್ಕಾರದವರು ಕೂಡಲೆ ತಮ್ಮ ಗಮನ ಕೊಡಬೇಕು.

ಇನ್ನು, ನಾನಾಗಲೇ ಹೇಳಿದಂತೆ, ನೌಕರರಿಗೆ ಬಡತಿ ಕೊಡತಕ್ಕಂಥ ವಿಚಾರದಲ್ಲಿ ಸರ್ಕಾರದವರು ಒಂದು ನಿರ್ದಿಷ್ಟವಾದ ನೀತಿಯನ್ನು ಅನುಸರಿಸಬೇಕು. ಈ ಕಾರ್ಖಾನೆಯಲ್ಲಿ ಇಷ್ಟು ವರ್ಷಗಳಿಂದ ಕೆಲಸ ಮಾಡಿದಾಗ್ಯೂ ಅಭಿವೃದ್ಧಿ ಹೊಂದಲು ನಮಗೆ ಅವಕಾಶವೇ ಇಲ್ಲ ಅನ್ನುವಂಥ ಒಂದು ಮನೋಭಾವ ಆ ಕಾರ್ಮಿಕರಿಗೆ ಹುಟ್ಟಬಾರದು. ಉದಾಹರಣೆಗೆ ಹೇಳುವುದಾದರೆ ನಮ್ಮ ಭದ್ರಾವತಿ ಕಾರ್ಖಾನೆಯಲ್ಲಿ ಈ ಹಿಂದೆ ಸಿಮೆಂಟ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಂಥ 3-4 ಜನ ದಕ್ಷರು ಇಲ್ಲಿಂದ ಕೆಲಸವನ್ನು ಬಿಟ್ಟು ಬೇರೆ ಕಡೆಗೆ ಹೋಗಿ ಬಿಟ್ಟರು. ಅಲ್ಲಿ ಈ ದಿವಸ ಅವರು ನಮ್ಮ ಸರ್ಕಾರದವರೇನು ಇಲ್ಲ ಸಂಬಳ ಕೊಡುತ್ತಿದ್ದಾರೋ ಅದಕ್ಕೆ ನಾಲ್ಕರಷ್ಟನ್ನು ಸಂಪಾದಿಸುತ್ತಿದ್ದಾರೆ. ಈ ದಿವಸ ಸಹ ಅವರ ಹೆಸರನ್ನು ಕಾರ್ಖಾನೆಯಲ್ಲಿ ಬಹಳ ಜನರು ಹೇಳುತ್ತಿದ್ದಾರೆ. ಅದುದರಿಂದ ದಕ್ಷತೆಯ ವಿಚಾರದಲ್ಲಿ ಸರ್ಕಾರದವರು ಇಷ್ಟೊಂದು ಘೋರಣಿಯಿಂದ ಉದಾಸೀನತೆಯಿಂದ ಇರಬಾರದು. ಅವರಿಗೆ ಸಾಕಷ್ಟು ಬಡತಿ ಇತ್ಯಾದಿ ಪ್ರೋತ್ಸಾಹಗಳನ್ನು ಕೊಡಲೇ ಬೇಕು ಎಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri I. V. MASCARENHAS (St. John's Hill).—Mr. Speaker, the emphasis in the Second Five-Year Plan is on industrial development and on maximum production and towards the same the Government is going to spend crores of rupees. It is gratifying to see that the Government at long last has taken the right decision and it is only hoped that they will go in the right direction. They have also declared that in doing so they will have no clash with the private sector. Nay, they are even prepared to give the private sector all encouragement and assistance. This is the best thing that they could do because, after all, when industries thrive and flourish, whether by private sector or public sector, the good of the country is the only goal. (Interruption). Unfortunately in five minutes I cannot speak much, but I must say that for the last three years I have been criticising the Government in giving the Director of Industries heavy burden of work with the result of fall in efficiency. At last the Minister for Industries has realised this, and now we have three Directors of Industries with three different spheres of work. I must congratulate the Government on that. The good results of these arrangements are already being seen and felt and I am sure in the years to come the results will be far more convincing. But in this connection, Sri Madhavachar has raised a very pertinent point which I wanted to mention. We must take care to see that the personnel we have not only in the managerial posts but also in the various establishments are kept happy.

1-30 P.M.

As he pointed out, our main difficulty is that trained technicians are leaving our country for better prospects. The reasons for this are not only smaller emoluments but other factors also and I shall be very grateful to the Government if they will give this matter their immediate and earnest consideration, so that in future at least Mysoreans, young men trained with Mysore money, are allowed, nay, forced to remain in the country doing for the country their maximum good. My friend Sri Srinivasa Iyengar talked of Sales Organisation, and said that the present system is not satisfactory and that we must open depots all over the country in the whole of India. I beg to point out that this is a most unfortunate and unsound advice. Each concern has its own sales agencies today and the agencies, I

(SRI V. M. MASCARENHAS.)

must say, are working quite satisfactorily.

Sri Mulka GOVINDA REDDY (Chitaldrug).—They must all be amalgamated into one.

Sri V. M. MASCARENHAS.—You cannot do it. A man who sells soap is quite different from the man who sells iron. A man who sells iron cannot certainly sell soap. The two are different trades. Therefore, I say that the suggestion is not very wise in my opinion. The rates of commission that we give are very reasonable and the volume of business is gradually going up and I personally feel that this system should be continued for some years to come. Regarding sandalwood oil, after all, the sale in this country is negligible, and most of our oil is sold in foreign countries and we have our sale agent in London. As such the sale of sandalwood oil in this country is not a problem at all.

I have only one more thing to say. Sir, during the Second Five-Year Plan, the Government must bestow enough care and attention to see that every pie they spend on industrial development, whether it be in their own sphere or whether they give aids or loans to other concerns, is well utilised and returns from those industries are guaranteed. Grant of indiscriminate loans, as in the past, should be carefully avoided and even where the Government start concerns, let them take all possible care to see that when those industries produce goods, there is a market for the goods that they produce and they can sell them competitively and also in every case profits are invariably the result.

*ಶ್ರೀ ಜಿ. ಪಾಪಣ್ಣ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ).—ರೇಷ್ಮೆ ಕೈಗಾರಿಕೆ ನಮ್ಮ ಸಂಸ್ಥಾನದಲ್ಲಿ ಪ್ರಮುಖ ಗೃಹ ಕೈಗಾರಿಕೆಗಳಲ್ಲಿ ಒಂದಾಗಿದೆ. ಮಾನ್ಯ ಮಂತ್ರಿಗಳು ಪ್ರಶ್ನೋತ್ತರ ಕಾಲದಲ್ಲಿ ಉತ್ತರ ಕೊಡುತ್ತಾ ಈ ಕೈಗಾರಿಕೆಗೆ ಸುಮಾರು 5 ವರ್ಷ ರಕ್ಷಣೆ ಸಿಕ್ಕಿದೆ ಎಂದು ಹೇಳಿದರು. ಕೆಲವಾರು ವರ್ಷಗಳಿಂದ ಕೈಗಾರಿಕೆಗೆ ರಕ್ಷಣೆಇದೆ. ಆದರೂಕೂಡ ಯಾವರೀತಿ ರಕ್ಷಣೆ ಕೊಡೆಯಬೇಕೋ, ಆ ರಕ್ಷಣೆ ಕೊಡೆಯುತ್ತಾ ಇಲ್ಲ. ಇದರಿಂದ ಪ್ರತಿ ದಿನವೂಕೂಡ ದರಗಳು ಏರುಪೇರು ಆಗುತ್ತಿವೆ. ಕೆಲವುಕಡೆ ಸರ್ಕಾರ ಸ್ವಂತ ಬಂದವಾಳ ಹಾಕಿ ನಡೆಸುತ್ತಿರುವ ಕಾರ್ಖಾನೆಗಳಲ್ಲಿಯೂ ನಷ್ಟ ವಾಗುವುದಕ್ಕೆ ಇದೂ ಒಂದು ಕಾರಣ. ಏರುಪೇರು ಗಳನ್ನು ನಿಲ್ಲಿಸುವುದಕೋಸ್ಕರ Central Silk Boardನವರು ಇತ್ತೀಚೆಗೆ ಒಂದು ಸಮಿತಿ ಮಾಡಿದ್ದಾರೆ. ಆ ಸಮಿತಿಯವರು ದೇಶದಲ್ಲೆಲ್ಲಾ ಸಂಚರಿಸಿ ಏನು ಶಿಫಾರಸ್ಸು ಮಾಡಿದ್ದಾರೋ ಗೊತ್ತಿಲ್ಲ. ಇಪ್ಪತ್ತೂಕೂಡ ದರಗಳ ಏರುಪೇರುಗಳ ಪರಿಣಾಮವನ್ನು ಆ ಕೈಗಾರಿಕೆ ಪಡೆದುಕೊಳ್ಳುವುದಕ್ಕೆ ಕಷ್ಟವಾಗಿದೆ. ಇಪ್ಪತ್ತಿನ ದಿವಸ ಬಜಾರಿನಲ್ಲಿ ಬೇಕಾದಷ್ಟು ರೇಷ್ಮೆ ಕೊಳ್ಳುವವರು ಇಲ್ಲದೆ ಬಿದ್ದಿದೆ. ಹೀಗೆ ರೈತರು ಬೆಳೆದ ರೇಷ್ಮೆಗೂಡುಗಳನ್ನು ಕೊಂಡುಕೊಳ್ಳುವವರು ಇಲ್ಲದೆ ಇರುವ ಪರಿಸ್ಥಿತಿಗೆ ಏನುಕಾರಣವೆಂದು ಸರ್ಕಾರದವರು ಕಂಡುಹಿಡಿದು ಕೇಂದ್ರ ಸರ್ಕಾರವನ್ನು ಒತ್ತಾಯ ಪಡಿಸಿ ಈಗಿರುವ ಪರಿಸ್ಥಿತಿಯನ್ನು ಮಾರ್ಪಾಡು ಮಾಡಬೇಕು ಎಂದು ಪ್ರಾರ್ಥಿಸುತ್ತೇನೆ. ನಮ್ಮ ಭಾರತದಲ್ಲಿ ತಯಾರಾಗತಕ್ಕಂಥ ರೇಷ್ಮೆಯಲ್ಲಿ ಸುಮಾರು ಅರ್ಧಕ್ಕಿಂತ ಹೆಚ್ಚಿನಭಾಗ ಮೈಸೂರಿನಲ್ಲಿ ತಯಾರಾಗುತ್ತಿದೆ. ರೇಷ್ಮೆ ಕೈಗಾರಿಕೆಯಲ್ಲಿ ಹೆಚ್ಚಿನ ಭಾಗ ಮೈಸೂರಿನಲ್ಲಿ ನಡೆಯುತ್ತಿದೆ. ರೇಷ್ಮೆ ಕೈಗಾರಿಕೆಯ ಹಿತದೃಷ್ಟಿಯನ್ನು ಕಾಪಾಡಲು Central Silk Board ಏರ್ಪಾಡು ಮಾಡಿದ್ದಾರೆ. ಆದ್ದರಿಂದ ನ್ಯಾಯವಾಗಿ ಮೈಸೂರಿಗೆ ಅರ್ಧಕ್ಕಿಂತ ಹೆಚ್ಚಿನ ಪ್ರಾತಿನಿಧ್ಯ ಆ ಸೆಂಟ್ರಲ್ ಸಿಲ್ಕ್ ಬೋರ್ಡಿನಲ್ಲಿರಬೇಕು. ಮೈಸೂರು ಸರ್ಕಾರದ ಮಾತುಕೂಡ Silk Board ನಲ್ಲಿ ನಡೆಯಬೇಕು. ಮೊನ್ನೆ ಒಂದು ದಿವಸ ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರವಾಗಿ ನಮ್ಮ ಸಲಹೆಯನ್ನು ಕೇಂದ್ರ ಸರ್ಕಾರದ Silk Board ನವರು ಅಂಗೀಕರಿಸಿಲ್ಲ ಎಂದು ಹೇಳಿದರು. ಈರೀತಿ ಸರ್ಕಾರದವರು ಬಿಡುವುದು ನ್ಯಾಯವಲ್ಲ. ಈ ಕೈಗಾರಿಕೆಯ ಹಿತದೃಷ್ಟಿಯಿಂದ ನಮ್ಮ ಮೈಸೂರು ಸರ್ಕಾರದ ಮಾತು ನಡೆಯಬೇಕು ಮತ್ತು ಈ ಕೈಗಾರಿಕೆಯ ಹಿತದೃಷ್ಟಿಯನ್ನು ಕಾಪಾಡಬೇಕು ಎಂದು ನಾನು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ. ಮತ್ತೆ ಅಭಿವೃದ್ಧಿ ಯೋಜನೆಗಳಿಗೆ ವರ್ಷೇವರ್ಷೇ ಬಜೆಟ್ಟಿನಲ್ಲಿ ಹೆಚ್ಚಿಗೆ ಹಣವನ್ನು ಒದಗಿಸುತ್ತಿದ್ದೀರಿ ಆದರೆ ಎಷ್ಟರ ಮಟ್ಟಿಗೆ ವೆಚ್ಚವಾಗಿ ಕಾರ್ಯರೂಪಕ್ಕೆ ಬರುತ್ತಿದೆ ಎಂಬುದನ್ನು ನೋಡಿದರೆ ಕೇವಲ ಶೇಕಡ 25ರಷ್ಟು ವೆಚ್ಚವಾಗುತ್ತಾ ಇಲ್ಲ. ಒಂದು ಕೆಲಸವೂ ಕೂಡ ಕಾರ್ಯಗತವಾಗುತ್ತಾ ಇಲ್ಲ. ಅಲ್ಲದೆ ಸಾಧಾರಣವಾಗಿ ವೆಚ್ಚಕ್ಕಾಗಿ ಒದಗಿಸಿರುವ ಹಣದ ಶೇಕಡ 45 ರಷ್ಟು ಖರ್ಚಾಗದೆ ಉಳಿದುಹೋಗುತ್ತದೆ. 1951-52 ರಲ್ಲಿ ಆಡಿಟ್ ವರದಿಯಲ್ಲಿ ಕೂಡ ಅದಕ್ಕೆ ಏನು ಕಾರಣ ವೆಂದು ಪ್ರಶ್ನಿಸಿದ್ದಾರೆ. ಅದಕ್ಕೆ ಉತ್ತರವಾಗಿ ತಮ್ಮ ಯೋಜನೆಗಳಿಗೆ ಮಂಜೂರಾತಿ ದೊರೆಯುವುದು ತಡವಾದುದರಿಂದಲೂ Public Works ಇಲಾಖೆಯವರು ಕೆಲಸ ಮಾಡುವುದು ತಡವಾದುದರಿಂದಲೂ ನಿಧಾನವಾಗಿದೆ ಎಂದು ಹೇಳಿದೆ.

ಅಧ್ಯಕ್ಷರು.—ಈ Public Works ಇಲಾಖೆಗೂ ಇದಕ್ಕೂ ಏನು ಸಂಬಂಧ ?

ಶ್ರೀ ಜಿ. ಪಾಪಣ್ಣ.—ಅದಕ್ಕೆ ಬೇಕಾದ Buildings ಕಟ್ಟಿಕೊಡಬೇಕು. ಈ ಸಾರಿ 32 ಲಕ್ಷ ರೂಪಾಯಿಗಳನ್ನು ಅದಕ್ಕೋಸ್ಕರ ಸರ್ಕಾರ ಒದಗಿಸಿದ್ದಾರೆ. ಇದಕ್ಕಾಗಿ ಸರ್ಕಾರದವರನ್ನು ನಾನು ಪೂರ್ಣವಾಗಿ ಅಭಿನಂದಿಸುತ್ತೇನೆ. ಆದರೆ ಕಳೆದ 2-3 ವರ್ಷಗಳಲ್ಲಿ ಆದ ಹಾಗಾಗಿ ಪುನಃ ನಿರಾಶೆ ಪಟ್ಟುಕೊಳ್ಳುವ ರೀತಿ ಆಗುವುದಿಲ್ಲವೆಂದು ನಂಬಿಕೊಂಡಿದ್ದೇನೆ. ಸರಿಯಾಗಿ ಕಾರ್ಯರೂಪಕ್ಕೆ ತರಬೇಕಾಗಿದ್ದರೆ ಏನುಮಾಡಬೇಕೆಂಬುದನ್ನು ಆಲೋಚನೆಮಾಡಿ ಬೇಗ ಕಾರ್ಯಗತವಾಡ ಬೇಕೆಂದು ಪ್ರಾರ್ಥಿಸುತ್ತೇನೆ. ಮತ್ತೊಂದು ವಿಷಯ.

Rural Industrialisation ಸ್ಕೀಮಿನ ಪ್ರಕಾರ ನಮ್ಮ ಕೋಲಾರ ಜಿಲ್ಲೆಯಲ್ಲಿ ಮತ್ತು ಬೆಂಗಳೂರು ಜಿಲ್ಲೆಯಲ್ಲಿ ಸುಮಾರು 3-4 ವರ್ಷಗಳಿಂದ ಕೆಲಸ ನಡೆಯುತ್ತಿದೆ. ಇವೊತ್ತು ಈ ಸಂಬಂಧದಲ್ಲಿ ಒಂದು ಪ್ರಶ್ನೆಗೆ ಉತ್ತರವಾಗಿ ಸಾವಿರ ಉದ್ಯಮಗಳು ನಡೆಯುತ್ತಿವೆ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರು. ಆದರೆ ನಾನು ನೋಡತಕ್ಕಂಥದರಲ್ಲಿ ಒಂದೂ ಕಾಣುತ್ತಾ ಇಲ್ಲ. Rural Industrialisation Schemeನಿಂದ ಆಗುವ ಒಂದೇ ಉಪಯೋಗ ಎಂದರೆ ರೈತರಿಗೆ ಕೆಲವು ಸಾಲಗಳು ಸಿಕ್ಕುತ್ತವೆ. ಈಗ ಸುಮಾರು 20 ಲಕ್ಷ ರೂಪಾಯಿ ಹಣ ಒದಗಿಸಿದ್ದಾರೆ. ಈ ಹಣ ಸರಿಯಾಗಿ ವೆಚ್ಚವಾಗಿ ನಿಜವಾಗಿ ಕೈಗಾರಿಕೆ ಅಭಿವೃದ್ಧಿ ಆಗಬೇಕಾಗಿದ್ದರೆ ಪ್ರತಿಯೊಂದು ಕಾಸೂ ಸರಿಯಾಗಿ ವೆಚ್ಚವಾಗಿ ಸರಿಯಾದ ರೀತಿಯಲ್ಲಿ ಪ್ರಯೋಜನವಾಗಬೇಕೆಂಬುದನ್ನು ನೋಡಬೇಕು. ಈ ಸಂದರ್ಭದಲ್ಲಿ ನಾನು ಒಂದು ಸಲಹೆ ಮಾಡುತ್ತೇನೆ. ಕೋಲಾರ ಡಿಸ್ಟ್ರಿಕ್ಟಿನಲ್ಲಿ ಸಾಧಾರಣವಾಗಿ ಕ್ಷಾಮ ಏದ್ದು ನೀರಾವರಿಗೆ ಅನುಕೂಲವಿಲ್ಲದೆ ಇರುವುದರಿಂದ ಯಾವುದಾದರೂ ಕೈಗಾರಿಕೆಯನ್ನು ಒಂದೊಂದು ಹಳ್ಳಿಯಲ್ಲಿ ನಡೆಯುವಂತೆ ಮಾಡುವುದು ಬಹಳ ಮುಖ್ಯವಾದುದು. ಕೋಲಾರ ಡಿಸ್ಟ್ರಿಕ್ಟಿನಲ್ಲಿ ಮಾತ್ರವಲ್ಲ, ಬೇರೆ ಎಲ್ಲೆಲ್ಲಿ ಕ್ಷಾಮವಿದೆಯೋ ಅಲ್ಲಿಯೂಕೂಡ ಈರೀತಿ ಮಾಡಬೇಕೆಂದು ನನಗೆ ತೋರುತ್ತದೆ. ರೇಷ್ಮೆ ಕೈಗಾರಿಕೆ ಬಿಟ್ಟರೆ ಇಂತಹ ಕಳಗಳಲ್ಲಿ ಬೇರೆಯಾವ ಕೈಗಾರಿಕೆಯನ್ನು ಮಾಡಲೂ ಅನುಕೂಲವಾಗಿಲ್ಲವೆಂದು ಎನ್ನಿಸುತ್ತದೆ. ಕೋಲಾರದ ಇತರ ಜಿಲ್ಲೆಗಳಲ್ಲಿ ಇದೇ ರೀತಿ ಇದೆ. ನಾನು ನೋಡಿರುವಹಾಗೆ ಅಲ್ಲಿ ಅನೇಕ ಸಣ್ಣ ಸಣ್ಣ ಕೆರೆಗಳಿವೆ. ಆದರೆ ರೈತರು ಬೆಳೆ ಆಗದೆ ವರ್ಷಕ್ಕೆ ವರ್ಷ ನಷ್ಟಪಟ್ಟುಕೊಳ್ಳುತ್ತಿದ್ದಾರೆ. ಇಲ್ಲಿ ಸ್ವಲ್ಪ ಇರುವ ನೀರನ್ನು ರೇಷ್ಮೆ ವ್ಯವಸಾಯಕ್ಕೆ ಬೇಕಾದ ಹಿಪ್ಪನೇರಳೆ ಸೊಪ್ಪನ್ನು ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡುವುದರಿಂದ ಕೈಗಾರಿಕೆ ತಾನೇತಾನಾಗಿ ಮುಂದಕ್ಕೆ ಬರುತ್ತದೆ. Rural Industrialisation Schemeಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡುವುದಕ್ಕೆ ಬದಲಾಗಿ ಈರೀತಿ ಕೈಗಾರಿಕೆಯನ್ನು ಪ್ರಚಾರವಾದಿ ಹೆಚ್ಚಿಗೆ ಹಣ ಖರ್ಚು ಇಲ್ಲದೆ ವ್ಯವಸ್ಥೆ ಗೊಳಿಸಬಹುದು. ಈರೀತಿ ವ್ಯವಸ್ಥೆ ಮಾಡುವುದರಿಂದ ಗ್ರಾಮಾಂತರಗಳಲ್ಲಿ ಮತ್ತು ಕ್ಷಾಮ ಪ್ರದೇಶಗಳಲ್ಲಿ ತಾವೂ ಈ ಕೈಗಾರಿಕೆಯನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆ. ಹಿಪ್ಪನೇರಳೆ ಬೆಳೆಯುವುದಾದರೆ ಈ ಕೈಗಾರಿಕೆ ಅಭಿವೃದ್ಧಿಯಾಗುವುದಕ್ಕೆ ಅನುಕೂಲವಾಗುತ್ತದೆ. ಇದನ್ನು ಸರ್ಕಾರದವರು ತೀವ್ರವಾಗಿ ಆಲೋಚನೆಮಾಡಿ ಕಾರ್ಯರೂಪಕ್ಕೆ ತರುತ್ತಾರೆ ಎಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಪರಿಶಿಷ್ಟ ಜಾತಿಗಳು).—ಸ್ವಾಮಿ, ಈ ಡಿಮ್ಯಾಂಡನ್ನು ನಾನು ವಿರೋಧಿಸುತ್ತೇವೆ. ಏತಕ್ಕೆಂದರೆ ನಮ್ಮ Budget ನಲ್ಲಿ allot ಮಾಡಿರತಕ್ಕಂಥ ಪೊಬಲಿಗಿನಲ್ಲಿ ಬಹುಶಃ Industriesಗೆ ಕೊಡತಕ್ಕಂಥ ದುಡ್ಡು ಎರಡನೆಯ ದಾಗಿರುತ್ತದೆ. 6,70,00,000 ರೂಪಾಯಿಗಳನ್ನು ಇದಕ್ಕೋಸ್ಕರ ತಾವು allot ಮಾಡಿರುತ್ತೀರಿ. ಆರು ಕೋಟಿ 70 ಲಕ್ಷ ರೂಪಾಯಿಗಳಿಂದ ಗ್ರಾಮಾಂತರಗಳಿಗೆ ಉಪಯೋಗವಾಗುತ್ತದೆಯೇ ಇಲ್ಲವೇ ಎಂಬುದನ್ನು ಯೋಚನೆ ಮಾಡುವುದಾದರೆ, ಈಗಾಗಲೇ ಮಾನ್ಯ ಕೆಲವು ಸದಸ್ಯರುಗಳು ಹೇಳಿರತಕ್ಕಂಥ ವಿಷಯಗಳು ವ್ಯಕ್ತವಾಗುತ್ತವೆ. ಮೊದಲನೆಯದಾಗಿ Village Industries ಎಂದು ನಾನು ಹೇಳುತ್ತಿದ್ದೇವೋ ಅದಕ್ಕೆ ಬೇಕಾದಷ್ಟು ದುಡ್ಡನ್ನು ಖರ್ಚು ಮಾಡುತ್ತಿದೇವೆ. ಆದರೆ Villageನಲ್ಲಿ ತಯಾರಾಗ ತಕ್ಕಂಥ finished goodsಗೆ ನಿಜವಾಗಿ ಮಾರ್ಕೆಟ್ಟನ್ನು ಕಂಡುಹಿಡಿದು ಅದರಿಂದ ರೈತರಿಗೆ ಏನಾದರೂ ಉಪಯೋಗವಾಗುವ ದಾರಿ ತೊರಿಸಿದ್ದೇವೆಯೇ ಹಳ್ಳಿಗಳಲ್ಲಿ ಚಾಪೆ ಮಾಡುತ್ತಾರೆ. ಒಬ್ಬ ಮನುಷ್ಯ ಎಷ್ಟು ಚಾಪೆ ಕೊಂಡುಕೊಳ್ಳುವುದಕ್ಕೆ ಆಗುತ್ತದೆ? ಒಂದು ಚಾಪೆ ಕೊಂಡುಕೊಂಡರೆ 10-15 ವರ್ಷಗಳ ಬರಬಹುದು. ಆದ್ದರಿಂದ ಪ್ರತಿನಿತ್ಯವೂ ಚಾಪೆಯನ್ನು ಮಾಡಿದರೆ ಏನಾಗುತ್ತದೆ? ಹಾಸನದ Implements Factoryಯಲ್ಲಿ ತಯಾರಾಗುವ ಸಾಮಾನುಗಳನ್ನೂ, ಚೆನ್ನಪಟ್ಟಣದಲ್ಲಿ ತಯಾರಾಗುವ ಬಣ್ಣದ ಸಾಮಾನುಗಳನ್ನೂ ಮಾರಿ ದಿನವೂ ಎಷ್ಟು ವ್ಯಾಪಾರ ಮಾಡಬಹುದು? ಇಂತಹ ಗ್ರಾಮ ಕೈಗಾರಿಕೆಗಳಿಗೆ ಸಾವಿರ ಗಟ್ಟಲೆ ಖರ್ಚುಮಾಡಿ Income ತರದೆ ರೈತನಿಗೆ ಹೊಟ್ಟೆಯಪಾಡಿಗೆ ಅವಕಾಶ ಇಲ್ಲದೆ ಇದ್ದರೆ ಅದರಿಂದ ಏನು ಪ್ರಯೋಜನ? ನಮ್ಮಲ್ಲಿ intellectual honesty ಇಲ್ಲ ಎಂದು ಹೇಳುತ್ತೇನೆ. ನಮ್ಮದೇಶದಲ್ಲಿ ಪ್ರಜಾ ಪ್ರಭುತ್ವ ಬಂದಮೇಲೆ ನಮ್ಮಲ್ಲಿ self-sufficiency ಆಗಬೇಕು. ನಮ್ಮ ದೇಶದಲ್ಲಿ ತಯಾರಾಗಿದ್ದಂಥ ಸಾಮಾನುಗಳನ್ನು ನಾವು ಉಪಯೋಗಿಸಬೇಕು, ಪರ ದೇಶಕ್ಕೆ ಹೋಗುವ ದುಡ್ಡನ್ನು ಕಡಿಮೆ ಮಾಡಬೇಕು, ಈ ಉದ್ದೇಶದಿಂದ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು. ಅದಕ್ಕೋಸ್ಕರ ಹೊರಗಡೆಗೆ ಕೆಲವು experts ಕಳುಹಿಸಿದ ಪಕ್ಷದಲ್ಲಿ ಅವರು ಆ ದೇಶದಲ್ಲಿ ಯಾವರೀತಿ ಪ್ರಚಾರ ಕಾರ್ಯ ಮಾಡುತ್ತಿದ್ದಾರೆ, ಗ್ರಾಮಾಂತರದಲ್ಲಿ ಯಾವರೀತಿ ಅಭಿವೃದ್ಧಿಯಾಗುತ್ತಿದೆ ಎಂಬುದನ್ನು ಕಷ್ಟಪಟ್ಟುಕೊಂಡು ನೋಡಿ ಬರಬಹುದು. ಹಾಗೆ ಇದುವರೆಗೆ ಯಾರನ್ನಾದರೂ ಕಳುಹಿಸಿದ್ದಾರೆಯೇ ಎಂಬುದು ನನಗಂತೂ ಗೊತ್ತಿಲ್ಲ. ನಾನು ಕೇಳಿರುವ ಹಾಗೆ ಜರ್ಮನಿಯಲ್ಲಿ Rural Industries ಹೇಗಿವೆಯೆಂದರೆ ಬೈಸಿಕಲ್ ಕೈಗಾರಿಕೆಯನ್ನು ತೆಗೆದುಕೊಂಡರೆ ಒಂದು ಕಡೆ handles ತಯಾರು ಮಾಡುತ್ತಾರೆ. ಮತ್ತೊಂದು ಕಡೆ ಚಕ್ರಗಳನ್ನು ಮಾಡುತ್ತಾರೆ. ಹೀಗೆ ಇದೂ ಒಂದು home industries ಯಂತೆ ನಡೆದು, ಅಲ್ಲಲ್ಲಿ ತಯಾರಾದ ಸಾಮಾನುಗಳನ್ನು Central Storesಗೆ ಕಳುಹಿಸಿಕೊಟ್ಟು ಅಮೇಲೆ ಆ ಸೆಂಟ್ರಲ್ ಸ್ಟೋರ್ಸಿನವರು ಹೊರದೇಶದ ಮಾರ್ಕೆಟ್ ಕಂಡುಹಿಡಿದು ಅವರೊಡನೆ compete ಮಾಡುವ ರೀತಿ ದೇಶವನ್ನು ಅಭಿವೃದ್ಧಿ ಪಡಿಸುತ್ತಿದ್ದಾರೆ. ಈರೀತಿ ಏನಾದರೂ ಒಂದು ಯೋಜನೆ ಇಟ್ಟುಕೊಂಡು ಗ್ರಾಮಾಂತರ ಕೈಗಾರಿಕೆಗಳನ್ನು develop ಮಾಡಿದರೆ ಜನರಿಗೆ ಅನುಕೂಲವಾಗುತ್ತದೆಯೇ ವಿನಾ ನಾವು ಏನೋ Budget Session ಬರುತ್ತದೆ, ಆಗ ಲಕ್ಷಾಂತರ ರೂಪಾಯಿ ಕೊಡುತ್ತೇವೆ ಎಂದು ಹೇಳುವುದರಲ್ಲಿ ಅಷ್ಟೇನೂ ತೃಪ್ತಿ ಕಾಣುವುದಿಲ್ಲ. ಪಾಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕೆಗಳನ್ನು ಯಾವರೀತಿ ಅಭಿವೃದ್ಧಿ ಮಾಡಬೇಕು ಎಂಬುದನ್ನು ಕಾರ್ಯರೂಪಕ್ಕೆತರಲು ಆಲೋಚನೆ ಮಾಡುತ್ತಿದ್ದೇವೆ. ಈ ಕೈಗಾರಿಕಾಭಿವೃದ್ಧಿ 5 ವರ್ಷಗಳಲ್ಲಿ ನಡೆದು ಅದರಿಂದ ಅನುಕೂಲವಾಗುತ್ತದೆ ಎಂಬುದು ನನಗೆ ಸ್ವಲ್ಪ ಸಂದೇಹವಾಗಿದೆ. ಆದರೆ ಪಾಂಚವಾರ್ಷಿಕ ಯೋಜನೆಯನ್ನು ತಾವು effect ಕೊಡುವುದಕ್ಕೆ ಮುಂಚೆ ಗ್ರಾಮಾಂತರಗಳಲ್ಲಿ ಯಾವ ಯಾವ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬಹುದು ಎಂಬ ಬಗ್ಗೆ ಒಂದು ಸರ್ವೆಮಾಡಿ, ಯಾವರೀತಿ ಕೈಗಾರಿಕೆಗಳನ್ನೂ ಸಹ ಸರ್ವೆ ಮಾಡಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು, ಪಾಂಚವಾರ್ಷಿಕ

(ಶ್ರೀ ಎಂ. ಚಿಕ್ಕಲಿಂಗಯ್ಯ.)

ಯೋಜನೆಯನ್ನು ಕಾರ್ಯಗತ ಮಾಡಿದರೆ ಅನುಕೂಲವಾಗುತ್ತದೆ. ಇಲ್ಲದೆ ಇದ್ದ ಪಕ್ಷದಲ್ಲಿ ನಮ್ಮನೆ ಕೊಡ ತಕ್ಕಂಥ ದುಡ್ಡು waste ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈಗ ಉದಾಹರಣೆ ಕೊಡುವುದಾದರೆ, ಕಳೆದ ಸಾಲಿನಲ್ಲಿ ಮಾನ್ಯ ಸಚಿವರು 'ಮಳವಳ್ಳಿ ತಾಲ್ಲೂಕಿನಲ್ಲಿ ಕೆಲಸ ಮಾಡುತ್ತಿರುವ ಪ್ರತಿಸೆಂಟರಿನಲ್ಲೂ ಬೈಸಿಕಲ್ ಪಾರ್ಟ್ಸ್ ಮಾಡುವುದಕ್ಕೋಸ್ಕರ ಇಂಡಿಯಾ ಸರ್ಕಾರದವರೊಡನೆ Correspondence ನಡೆಸುತ್ತಿದ್ದೇವೆ. ಅದಷ್ಟು ಜಾಗ್ರತೆ ಕಾರ್ಯಗತ ಮಾಡುತ್ತೇವೆ' ಎಂದು ಅಪ್ಪಣೆ ಕೊಟ್ಟಿದ್ದರು. ಹನ್ನೆರಡು ತಿಂಗಳುಗಳಾದುವು. ಇವೊತ್ತು ನೋಡಿದರೆ ಆ Smithy Centre ಮುಚ್ಚುವ ಸ್ಥಿತಿಗೆ ಬಂದಿವೆ. ಅದು ಈಗ ಬೇರೆ ಕಡೆಗೆ ಹೋಗುವಹಾಗೆ ತೋರುತ್ತದೆ. ಹೀಗೆ ಮಳವಳ್ಳಿಯಲ್ಲಿ ಒಂದುಕಾಲು, ರಾಮನಗರದಲ್ಲಿ ಇನ್ನೊಂದು ಕಾಲು ಇಟ್ಟರೆ ಇದರಿಂದ ಪ್ರಯೋಜನವಾಗುವುದಿಲ್ಲ. ಇಂತಹ ರೂರಲ್ ಇಂಡಸ್ಟ್ರೀಸ್ encourage ಮಾಡಬೇಕಾದರೆ ಸಾಮಿರಾಗು ರೂಪಾಯಿಗಳನ್ನು ಖರ್ಚು ಮಾಡುತ್ತಾ ಹೋದಪಕ್ಷದಲ್ಲಿ ಜನಗಳಿಗೆ ಏನು ಅನುಕೂಲವಾಗುತ್ತದೆ ಎಂಬುದು ಸ್ವಲ್ಪ ಸಾವಧಾನವಾಗಿ ಯೋಚನೆ ಮಾಡತಕ್ಕಂಥ ವಿಷಯ.

ಅಲ್ಲದೆ ಎರಡನೆಯ ಪಂಚವಾರ್ಷಿಕಯೋಜನೆಯಲ್ಲಿ ಸಕ್ಕರೆ ಕಂಪೆನಿಯೊಂದನ್ನು ಮಳವಳ್ಳಿ ತಾಲ್ಲೂಕಿನಲ್ಲಿ ಕೋ-ಆಪರೇಟಿವ್ ಬೇಸಿಸ್‌ಮೇಲೆ start ಮಾಡಬೇಕೆಂಬ ಅಭಿಪ್ರಾಯವನ್ನು ಡೈರೆಕ್ಟರವರು ಕೊಟ್ಟಿದ್ದಾರೆಂದು ಮಾನ್ಯ ಸಚಿವರು ಒಂದು ಆಶೋತ್ತರವನ್ನು ಸೂಚಿಸಿದರು. ಹೀಗೆಯೇ ಆಶೋತ್ತರಗಳಾಗುತ್ತಿರುತ್ತವೆ, ಕೆಲಸ ಮಾತ್ರ ಮುಂದೆ ಮುಂದೆ ಹೋಗುತ್ತಿದೆ. ಯಾವ ರೀತಿ ಪ್ರಾರಂಭಮಾಡಬೇಕೆಂದು instructions ಕೂಡ ಕೊಡುತ್ತೇವೆಂದು ಅಪ್ಪಣೆ ಕೊಡಿಸಿದರು ಅದನ್ನೂ ಮಾಡಿದಂತೆ ಕಾಣಲಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಪಾಂಡವಪುರಕ್ಕೆ ಕೊಟ್ಟಿದ್ದಾರಲ್ಲಾ !

ಶ್ರೀ ಎಂ. ಚಿಕ್ಕಲಿಂಗಯ್ಯ.—ಮಳವಳ್ಳಿಯೇ ಬೇರೆ, ಪಾಂಡವಪುರವೇ ಬೇರೆ. ಅಮೇಲೆ, ರೇಷ್ಮೆಯ ವಿಚಾರದಲ್ಲಿ, ಗೂಡು ಸಾಗಾಣಿಕೆ ಸಂಬಂಧದಲ್ಲಿ ಪ್ರತಿ ಸಾರಿಯೂ ವ್ಯಾಪಾರಿಗಳಿಂದ ಯಾವ ರೀತಿ ತೊಂದರೆಯಾಗುತ್ತಿದೆ, ರೈತ್ಯಾಳಿಗಳು ಯಾವ ರೀತಿ ಮೋಸ ಮಾಡುತ್ತಿದ್ದಾರೆಂಬುದನ್ನು ಯಾರೂ ಪರಿಶೀಲನೆ ಮಾಡಿದಂತೆ ಕಾಣಲಿಲ್ಲ. ಮಳವಳ್ಳಿಯಲ್ಲಿ ಒಂದು ನೆರಿಕಲ್ಚರಲ್ ಸ್ಕೂಲಿದೆ. ಆಲ್ಲಿ ಏನೇನು ಅನಾನುಕೂಲಗಳಿವೆಯೆಂಬುದನ್ನು ನಾನು ಅನೇಕ ಸಾರಿ ತಮ್ಮ ಗಮನಕ್ಕೆ ತಂದೆ. ತಾವು ಏನೂ ಮಾಡಲಿಲ್ಲ. ಕೊನೆಗೆ ನನಗೂ ಬೇಸರವಾಗಿ ನಾನು ಕೇಳುವುದನ್ನೇ ಬಿಟ್ಟು ಬಿಟ್ಟೆ. ಈ ರೀತಿ ಮಾಡಿದರೆ ಗ್ರಾಮ ಕೈಗಾರಿಕೆಗಳು ಮುಂದುವರಿಯುತ್ತವೆಯೇ ! ಆದ್ದರಿಂದ ಈ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಯಾವ ಮೊಹಲ್ಲಾದಲ್ಲಿ ಯಾ ರೀತಿ ಮಾಡಿದರೆ ರೈತರಿಂದ ಉತ್ಪತ್ತಿಯೂ ಜಾಸ್ತಿಯಾಗುತ್ತದೆ, ಸರ್ಕಾರಕ್ಕೂ ನಷ್ಟವಾಗುವುದಿಲ್ಲ ಎಂಬುದನ್ನು ಪರಿಶೀಲನೆಮಾಡಿ ನರಿಯಾದ ಯೋಜನೆಯನ್ನು ಆಳವಡಿಸಿಕೊಂಡು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಅಧ್ಯಕ್ಷರೇ, ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಬೇಕಾದರೆ, ದೇಶದಲ್ಲಿ ಕೈಗಾರಿಕೆ ಸರ್ವತೋಮುಖವಾಗಿ ಅಭಿವೃದ್ಧಿ ಹೊಂದತಕ್ಕದ್ದು ಅವಶ್ಯಕವೆಂಬ ವಿಚಾರ ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ. ಈ ದೃಷ್ಟಿಯಿಂದಲೇ ಕೇಂದ್ರ ಸರ್ಕಾರದವರೂ ಸಹ ತಮ್ಮ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚಾಗಿ ಕೈಗಾರಿಕಾಭಿವೃದ್ಧಿಗೆ ಗಮನವನ್ನು ಕೊಡುವವರಾಗಿದ್ದಾರೆ. ಇದೇ ದೃಷ್ಟಿಯನ್ನು ಸಂಸ್ಥಾನಗಳೂ ಸಹ ಇಟ್ಟುಕೊಂಡು ಸಂಸ್ಥಾನಾಮಳೆ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸತಕ್ಕದ್ದು ಬಹಳ ಅಗತ್ಯ. ಅದರಲ್ಲೂ ಕೆಲವು ಕೈಗಾರಿಕೆಗಳನ್ನು ಸರ್ಕಾರದವರೇ ತೆಗೆದುಕೊಳ್ಳಬಹುದಾಗಿದೆ. ಇನ್ನು ಕೆಲವನ್ನು ಖಾಸಗೀ ಜನಗಳು ಮುಂದೆ ಬಂದು ಮಾಡಬಹುದಾಗಿವೆ. ಸರ್ಕಾರದವರು, ಖಾಸಗಿ ಜನಗಳಿಂದ ಯಾವ ಯಾವ ಕೈಗಾರಿಕೆಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲವೋ ಅಂಥ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಅಗತ್ಯವಾಗಿ ತೆಗೆದುಕೊಳ್ಳಲೇ ಬೇಕಾದದ್ದು ಯುಕ್ತ. ಎಲ್ಲಿ ಇಂಥ ದರ ಅವಶ್ಯಕತೆಯಿಲ್ಲವೋ, ಎಲ್ಲಿ ಖಾಸಗೀ ಜನಗಳೇ ಮುಂದೆ ಬಂದ ಕೈಗಾರಿಕೆಗಳನ್ನು ನಡೆಸಲು ಸಾಧ್ಯವಿದೆಯೋ ಅಂಥ ಕಡೆ ಸಂಪೂರ್ಣವಾಗಿ ಆ ಕೈಗಾರಿಕೆಗಳನ್ನು ಖಾಸಗೀ ಜನರಿಗೆ ಬಿಡತಕ್ಕದ್ದು ಅವಶ್ಯಕ. ಆದರೆ, ಹೀಗೆ ಖಾಸಗೀ ಜನರು ಈ ಕೈಗಾರಿಕೆಗಳನ್ನಿಟ್ಟು ಅವುಗಳನ್ನು ನಡೆಸಿಕೊಂಡು ಅಭಿವೃದ್ಧಿಗೆ ತರಬೇಕಾದರೆ ಆ ಕೈಗಾರಿಕೆಗಳಿಗೆ ಅಗತ್ಯವಾದ ಹಣ ಸೌಕರ್ಯವನ್ನು ಕಲ್ಪಿಸಿಕೊಡಬೇಕಾದದ್ದು ಬಹು ಮುಖ್ಯವಾದ ವಿಚಾರ. ನಮ್ಮ ದೇಶದಲ್ಲಿ, ಅದರಲ್ಲೂ ಸ್ವಾತಂತ್ರ್ಯ ಬಂದಮೇಲೆ, ಕೈಗಾರಿಕೆಗಳ ಕಡೆ ಜನಗಳ ಗಮನ ಹೆಚ್ಚಾಗಿ ಹರಿಯುತ್ತಿದೆ. ಅವುಗಳಲ್ಲಿ ಅನುಭವವನ್ನು ಪಡೆದುಕೊಂಡು ಬಂದಿರುವ ಜನಗಳೂ ಕೂಡ ಅನೇಕರಿದ್ದಾರೆ. ಆದ್ದರಿಂದ ಈಗ ಅಗತ್ಯವಾಗಿ ಬೇಕಾಗಿರುವುದು 'capital'. We are shy of capital ಎಂಬುದು ಎಲ್ಲರಿಗೂ ಗೊತ್ತೇ ಇದೆ. ನಮಗೆ ಸಾಕಷ್ಟು ಹಣ ಸೌಕರ್ಯವಿಲ್ಲ. ಇಂಥ ಸಂದರ್ಭದಲ್ಲಿ ಸರ್ಕಾರ ಮುಂದೆ ಬಂದು ಖಾಸಗೀ ಕೈಗಾರಿಕೆಗಳನ್ನು ಕೈಕೊಳ್ಳುವುದಕ್ಕೆ ಅಗತ್ಯವಾಗಿ ಬೇಕಾದ ಹಣ ಒದಗಿಸಲು ಏರ್ಪಾಡು ಮಾಡಲೇಬೇಕು. ಕೇಂದ್ರ ಸರ್ಕಾರದವರೂ ಇದನ್ನು ಯೋಚನೆ ಮಾಡುತ್ತಿದ್ದಾರೆ. ಸಂಸ್ಥಾನದ ಸರ್ಕಾರದವರೂ ಇದಕ್ಕಾಗಿ ಒಂದು ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪೊರೇಷನ್ ಮಾಡಬೇಕೆಂದು ಯೋಚನೆಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಇದನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ರೀತಿಯಾದ ಮನೋಭಾವವನ್ನು ಎಲ್ಲರೂ ಮೊದಲು ನಿಂದಲೂ ವ್ಯಕ್ತಪಡಿಸುತ್ತಿರುತ್ತಾರೆ. ಆದರೆ ಇದು ವರೆಗೂ ಯಾರೂ ಕಾರ್ಯಗತಮಾಡಿಲ್ಲ. ಈಗ ಸಾಧಾರಣವಾಗಿ 5-6 ವರ್ಷಗಳಿಂದಲೂ ಪ್ರತಿಯೊಂದು ಬಜೆಟ್ ಭಾಷಣದಲ್ಲೂ ಸಹ ಈ ರೀತಿ Industrial Finance Corporation ಮಾಡಬೇಕೆಂದಿದ್ದೇವೆ, ಅದಕ್ಕೆ ಇಷ್ಟು ಹಣವನ್ನು ಇಟ್ಟುಕೊಂಡಿದ್ದೇವೆ ಎಂದು ಹೇಳುತ್ತಲೇ ಇದ್ದಾರೆ. ಶ್ರೀಮಾನ್ ಎಚ್. ಸಿ. ದಾಸಪ್ಪನವರು ಮಂತ್ರಿಗಳಾಗಿದ್ದಾಗ ಅವರು ಇದನ್ನೇ ಒತ್ತಿ ಒತ್ತಿ ಹೇಳುತ್ತಿದ್ದರು. ಇತ್ತೀಚೆಗೆ ಚೀಫ್ ಮಿನಿಸ್ಟರು ಅವರ ಸ್ಥಾನಕ್ಕೆ ಬಂದಿದ್ದಾರೆ. ಇಷ್ಟಾದರೂ, ಈ ಹೊತ್ತಿನವರೆಗೂ ಯಾರೂ ಕಾರ್ಯಗತಮಾಡಿಲ್ಲ. ಇದನ್ನು ಕಾರ್ಯಗತ ಮಾಡುವುದು ಖಂಡಿತ ಅವಶ್ಯಕವಾಗಿದೆ. ಇಲ್ಲದಿದ್ದರೆ, ದೇಶದಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗುವುದಕ್ಕೆ ಮತ್ತು ಸ್ಥಾಪನೆಯಾಗಿರುವ ಕೈಗಾರಿಕೆಗಳು ಅಭಿವೃದ್ಧಿಯಾಗುವುದಕ್ಕೆ ಅಡಚಣೆಯಾಗುತ್ತದೆ. ಈ ಕಡೆ ಸರ್ಕಾರದವರು ಮುಂದೆ ಬಂದು ಫೈನಾನ್ಸ್ ಕಾರ್ಪೊರೇಷನ್ ಸ್ಥಾಪನೆ ಮಾಡುವುದು ಅಗತ್ಯ. ಕೇಂದ್ರ ಸರ್ಕಾರದವರು ಈಗಾಗಲೇ

ಇದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಬೊಂಬಾಯಿನಲ್ಲಿ ನಮ್ಮ ಸಂಸ್ಥಾನದ ಹಿಂದಿನ ದಿವಾನರಾಗಿದ್ದ ಸರ್ ಆರ್ಕಾಟ್ ರಾಮ ಸ್ವಾಮಿ ಮೊದಲಿಯಾರ್‌ರವರ ಆಡಳಿತದಲ್ಲಿ ಒಂದು Industrial Credit Corporation ಎಂಬುದನ್ನು ಸ್ಥಾಪಿಸಿ ಅದಕ್ಕೆ ಐದು ಕೋಟಿ ರೂಪಾಯಿಗಳ ಷೇರ್ ಬಂಡವಾಳವನ್ನು ಕರೆದಿದ್ದರಷ್ಟೇ ಕೇವಲ ಸ್ವಲ್ಪ ದಿವಸಗಳಲ್ಲಿಯೇ ಅಷ್ಟು ಬಂಡವಾಳವೂ ಜಮಾವಣೆ ಯಾಯಿತೆಂದು ಕೇಳಿದ್ದೇವೆ. ಕೇಂದ್ರ ಸರ್ಕಾರದವರೂ ಅದಕ್ಕೆ ಸ್ವಲ್ಪ ಹಣ ಕೊಟ್ಟಿದ್ದಾರೆ. World Bank ಕೂಡ ಹಣ ಸಹಾಯಮಾಡಿದ್ದಾರೆ. ಆದ್ದರಿಂದ ಪ್ರತಿ ಯೊಂದು ಸಂಸ್ಥಾನದಲ್ಲೂ ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪೊರೇಷನ್ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಮೊದಲಿನಿಂದಲೂ ಕೈಗಾರಿಕೆಯಲ್ಲಿ ಅಗ್ರ ಸ್ಥಾನವನ್ನುಗಳಿಸಿದ ಮೈಸೂರು ಸಂಸ್ಥಾನದಲ್ಲಿ ಈ ರೀತಿಯ ವ್ಯವಸ್ಥೆ ಅಗತ್ಯವಾಗಿದೆ. ಈ ರೀತಿಯಾಗಿ ಹಣವನ್ನು ಒದಗಿಸಿಕೊಟ್ಟು ಬಡವರಿಗೆ ಸಹಾಯ ಮಾಡಿದಲ್ಲಿ ಖಂಡಿತವಾಗಿಯೂ ಹತ್ತಾರು ವರ್ಷ ಗಳಲ್ಲೇ ಎಷ್ಟು ಹಣ ಒದಗಿಸುತ್ತೀರೋ ಅದರ ಹತ್ತರಷ್ಟು ಸರ್ಕಾರಕ್ಕೆ ಉತ್ಪತ್ತಿ ಬರಮಾಡಿಕೊಳ್ಳುವ ಅವಕಾಶವಿದೆ. ರಾಷ್ಟ್ರದ ಉತ್ಪನ್ನ ಜಾಸ್ತಿಯಾಗುತ್ತದೆ, ಅನೇಕ ನಿರುದ್ಯೋಗಿಗಳಿಗೆ ಕೆಲಸ ಸಿಕ್ಕಿ ನಿರುದ್ಯೋಗ ಸಮಸ್ಯೆ ಪರಿಹಾರವಾಗುತ್ತದೆ. ಇನ್ನೂ ನಾನಾ ಮುಖವಾದ ಅನುಕೂಲಗಳು ಈ ಕೈಗಾರಿಕೆಗಳಿಂದ ಆಗಲಿವೆ. ಇದನ್ನು ಸರ್ಕಾರದವರು ಮನಗಂಡು ಕೂಡಲೆ ನಮ್ಮ ಸಂಸ್ಥಾನದಲ್ಲಿ ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪೊರೇಷನ್ ಸ್ಥಾಪನೆ ಮಾಡಬೇಕೆಂದು ಹೇಳಿ ನಾನು ಸರ್ಕಾರದವರಿಗೆ ಸೂಚಿಸುತ್ತೇನೆ.

ಎರಡನೆಯದಾಗಿ, ಈ ರೀತಿಯಾಗಿ ಕೈಗಾರಿಕೆ ಗಳನ್ನು ಸ್ಥಾಪನೆಮಾಡುವ ಕಾಲದಲ್ಲಿ ಖಾಸಗಿ ಉದ್ಯಮಕ್ಕೂ ಸರ್ಕಾರದವರು ನಡೆಸತಕ್ಕ ಉದ್ಯಮಕ್ಕೂ ಘರ್ಷಣೆ ಬರಬಾರದು, ಹೈಪೋಟಿ ಬರಬಾರದು. ಇದನ್ನು ನಾವು ಚೆನ್ನಾಗಿ ಮನಗಾಣಬೇಕು. ಉದಾಹರಣೆಗೆ, ಈಗ ಭದ್ರಾವತಿ ಕಬ್ಬಿಣದ ಕಾರ್ಖಾನೆಯಿದೆ. ಇದು ಇಡೀ ರಾಷ್ಟ್ರಕ್ಕೆ ಸಂಬಂಧಪಟ್ಟ ಕೈಗಾರಿಕೆ. ಇಂಥ ಕೈಗಾರಿಕೆಯನ್ನು ಜನರು ಮಾಡುವುದಕ್ಕಾಗುವುದಿಲ್ಲ. ಇಂಥ key industriesಗಳನ್ನು ಸರ್ಕಾರದವರೇ ಮಾಡಬೇಕು. ಆದ್ದರಿಂದ ಇಂಥವುಗಳನ್ನು ಸರ್ಕಾರದವರು ಕೈಕೊಳ್ಳಬೇಕೇ ಹೊರತು ಇತರ ಕೈಗಾರಿಕೆಗಳನ್ನು ಸರ್ಕಾರದವರು ಮಾಡುವುದು ಒಳ್ಳೆಯದಲ್ಲವೆಂದು ನಾನು ತಿಳಿಸಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ, Mysore Electrical Industries ಇವೆ. ಇದು ವರೆಗೂ ಅಲ್ಲಿ ಟ್ರಾನ್ಸ್‌ಫಾರ್ಮರುಗಳು—ಮುಂತಾದುವನ್ನು ತಯಾರುಮಾಡಿಕೊಂಡು ಬರುತ್ತಿದ್ದರು. ಈಗ ಎಲೆಕ್ಟ್ರಿಕಲ್ ಮೋಟಾರುಗಳನ್ನು ಮಾಡಬೇಕೆಂದು ಸರ್ಕಾರದವರು ತೀರ್ಮಾನ ಮಾಡಿರುವ ಹಾಗಿದೆ. ಆದರೆ, ಎಲೆಕ್ಟ್ರಿಕಲ್ ಮೋಟಾರುಗಳು ಮುಂತಾದುವುಗಳನ್ನು ತಯಾರಿಸತಕ್ಕ ಕಂಪೆನಿಗಳು ಇಂಡಿಯಾ ದೇಶದಲ್ಲಿ ನೂರಾರು ಅರ್ಧ ಡಜನ್ನಿಗಿಂತ ಜಾಸ್ತಿ ಯಿವೆ. ಬೆಂಗಳೂರಿನಲ್ಲೇ ಕಿರ್ಲೋಸ್ಕರ್ ಕಂಪೆನಿ ಯಿದೆ. ಇಂಥ ಸಂದರ್ಭದಲ್ಲಿ ಸರ್ಕಾರದವರೂ ಇದೇ ಎಲೆಕ್ಟ್ರಿಕಲ್ ಸಾಮಾನುಗಳನ್ನು ತಯಾರು ಮಾಡುವುದಾದರೆ, ಖಾಸಗಿಯವರೊಡನೆ ಹೈಪೋಟಿ ನಡೆಸುವುದಾದರೆ . . . .

Sri H. SIDDAVEERAPPA.—I very much appreciate the point of the Hon'ble Member, but I would like to bring to your notice that we have already invested considerable amount of money running to some lakhs and our machinery are lying idle for the last so many years.

ಶ್ರೀ ಕೆ. ಲಕ್ಕಪ್ಪ.—ಮೆಷಿನರಿಗಳಿದ್ದರೆ, ಅವು ಗಳನ್ನು ಬೇಕಾದರೆ ಬೇರೆಯವರಿಗೆ ಕೊಡುವ ಯೋಚನೆ ಮಾಡಬಹುದು. ಅಥವಾ ಇನ್ನೇನಾದರೂ ವ್ಯವಸ್ಥೆ ಮಾಡಬಹುದು. ಅಂತೂ, ಖಾಸಗಿ ಕೈಗಾರಿಕೆಗಳೊದನೆ ಸರ್ಕಾರಿ ಪೈಪೋಟಿ ನಡೆಸುವುದು ಸೂಕ್ತವಲ್ಲವೆಂದು ನಾನು ಹೇಳುತ್ತಿದ್ದೇನೆಯೇ ಹೊರತು, ಸರ್ಕಾರದವರು ಆ ಕೈಗಾರಿಕೆಗಳನ್ನೇ ನಡೆಸಕೂಡದೆಂದು ಹೇಳುತ್ತಿಲ್ಲ. ನಿಮ್ಮೆಲ್ಲರಿಗೂ ಗೊತ್ತೇ ಇದೆ, ಖಾಸಗಿಯವರು ಕೈಗಾರಿಕೆಗಳನ್ನು ನಡೆಸುವುದಕ್ಕೂ, ಸರ್ಕಾರದವರು ಕೈಗಾರಿಕೆಯನ್ನು ನಡೆಸುವುದಕ್ಕೂ ಏನು ವ್ಯತ್ಯಾಸವಿದೆ ಎಂಬುದು. ಖಾಸಗಿ ಕೈಗಾರಿಕೆಗಳೊದನೆ ಸರ್ಕಾರಿ ಕೈಗಾರಿಕೆ ಗಳು ಎಷ್ಟು ಮಾತ್ರವೂ ಪೈಪೋಟಿ ಮಾಡಲಾರವು. ಈ ದೃಷ್ಟಿಯಿಂದ ಸರ್ಕಾರದವರು ಇಂಥ ಕೈಗಾರಿಕೆ ಗಳನ್ನು ನಡೆಸುವುದರಿಂದ ಪ್ರಯೋಜನವಾಗಲಾರದು ಎಂದು ನಾನು ಹೇಳುತ್ತೇನೆ. ಇವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಸರ್ಕಾರದವರು ಕೈಗಾರಿಕಾಭಿ ವೃದ್ಧಿಗೆ ಸರ್ವ ಸಹಾಯವನ್ನೂ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಪೆ. ಎಂ. ಚಂದ್ರಶೇಖರಯ್ಯ (ಕಡೂರು).—ಅಧ್ಯಕ್ಷರೇ, ಈ ಡಿಮ್ಯಾಂಡನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಎರಡು ಮೂರು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದಿಚ್ಛಿಸುತ್ತೇನೆ. ಕಡೂರು ತಾಲ್ಲೂಕಿನಲ್ಲಿ ತೆಂಗಿನ ಬೆಳೆ ಒಂದು ಪ್ರಾಮುಖ್ಯವಾದ ಬೆಳೆ. ಮೈಸೂರು ದೇಶದಲ್ಲಿ ತೆಂಗಿನ ಬೆಳೆ ಜಾಸ್ತಿಇರುವ ಪ್ರದೇಶವೆಂದರೆ ತುಮಕೂರು ಜಿಲ್ಲೆಯ ಕೆಲವು ಭಾಗಗಳು, ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆಯ ಕಡೂರು, ತರೀಕೆರೆ ತಾಲ್ಲೂಕುಗಳು. ತೆಂಗಿನ ವ್ಯವಸಾಯ ಜಾಸ್ತಿಯಾಗಿರುವ ಈ ತಾಲ್ಲೂಕುಗಳಲ್ಲಿ ತೆಂಗಿನ ನಾರಿನ ಕೈಗಾರಿಕೆಗೆ ಎಷ್ಟೋ ಅವಕಾಶ ವಿದ್ದರೂ ಅಂಥ ಒಂದು ಕೈಗಾರಿಕೆಯನ್ನು ಇದುವರೆಗೂ ಸ್ಥಾಪನೆ ಮಾಡದಿರುವ ಕಾರಣ ಆ ಜನ ತೆಂಗಿನ ನಾರು, ಸಿಪ್ಪೆ, ಮುಂತಾದುವುಗಳನ್ನೆಲ್ಲಾ ಬಿಸಾಡುತ್ತಿದ್ದಾರೆ. ಕೆಲವು ಕಡೆ ಒಲೆಗೂ ಹಾಕುತ್ತಿದ್ದಾರೆ. ತೆಂಗಿನ ನಾರು ಬಹಳ ಪ್ರಯೋಜನಕಾರಿ ಯಾದಂಥಾದ್ದು. ಆದರೆ ಅದನ್ನು ಉಪಯೋಗಕ್ಕೆ ತರಬಹುದಾದ ಕಾರ್ಖಾನೆ ಮೈಸೂರು ದೇಶದಲ್ಲಿ ಎಲ್ಲಿಯೂ ಇಲ್ಲ. ತೆಂಗಿನ ಚಿಪ್ಪಿನಿಂದ ಗುಂಡಿಗಳನ್ನು ಕೂಡ ಮಾಡಬಹುದು.

ಆದ್ದರಿಂದ ತೆಂಗಿನ ನಾರಿನ ಉಪಯೋಗದ ಕಾರ್ಖಾನೆಯೊಂದನ್ನು ಕಡೂರು ತಾಲ್ಲೂಕಿನಲ್ಲಿ ಸ್ಥಾಪಿ ಸುವುದಕ್ಕೆ ಎಲ್ಲಾ ಅನುಕೂಲತೆಗಳೂ ಇವೆ. ಬೇಕಾದಷ್ಟು ನೀರಿನ ಸೌಕರ್ಯವಿದೆ. ಜೊತೆಗೆ, ಕಡೂರು ತಾಲ್ಲೂಕಿನಲ್ಲಿ ಇದುವರೆಗೂ ಯಾವತರದ ಕಾರ್ಖಾನೆ ಯನ್ನೂ ಸರ್ಕಾರದವರು ಸ್ಥಾಪನೆಮಾಡಿಲ್ಲ. ನಾನು ಈ ಅಸೆಂಬ್ಲಿ ಸದಸ್ಯನಾಗಿ ಮೂರು ವರ್ಷದ ಅಗಾಯಿತು ನಮ್ಮ ಜಿಲ್ಲೆಯಲ್ಲಿ ಯಾವುದಾದರೂ ಕೈಗಾರಿಕೆ

(ಶ್ರೀ ಜೈ. ಎಂ. ಚಂದ್ರಶೇಖರಯ್ಯ.)

ಯನ್ನು ಸ್ಥಾಪನೆ ಮಾಡಿಕೊಡಿ ಎಂದು ಕೇಳುತ್ತಿದ್ದೇನೆ. ಆದರೇನು, ನಮ್ಮ ಜಿಲ್ಲೆಯನ್ನು ಮಲತಾಯಿಯು ಮಕ್ಕಳಂತೆ ಕಾಣುತ್ತಿದ್ದಾರೆ. ಈ ಅಸೆಂಬ್ಲಿಯ ಸದಸ್ಯತ್ವ ಮುಗಿಯುವುದರೊಳಗಾದರೂ ನಮ್ಮಲ್ಲೊಂದು ಕೈಗಾರಿಕೆಯನ್ನು ಸ್ಥಾಪಿಸಿಕೊಡುತ್ತೀರೆಂದು ನಂಬಿದ್ದೇನೆ. ಇನ್ನೊಂದು ದೃಷ್ಟಿಯಿಂದಲೂ ನನ್ನ ಸಲಹೆಯನ್ನು ತಾವು ಪರಿಶೀಲಿಸಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಅನೇಕ ಜನ ನಿರುದ್ಯೋಗಿಗಳಿದ್ದಾರೆ. ಅವರು ದೂರವಾದ ಬೆಂಗಳೂರು ಮೈಸೂರು ಸಿಟಿಗಳಿಗೆ ಬಂದು ಇಲ್ಲಿನ ಕಾರ್ಖಾನೆಗಳಲ್ಲಿ ಕೆಲಸ ಪಡೆಯಬೇಕೆಂದರೆ ಬಹಳ ಕಷ್ಟ. ಇಲ್ಲಿ ಕೆಲಸಗಳನ್ನು ಪಡೆಯಬೇಕಾದರೆ ಬಹಳ ಮಟ್ಟಿಗೆ ಶಿಫಾರಸ್ಸು ಬೇಕಾಗಿರುತ್ತದೆ. ಹಾಗಿರುವಾಗ ಮಲೆನಾಡಿನಿಂದ ಬರತಕ್ಕ ಜನರಿಗೆ ಈ ಕಾರ್ಖಾನೆಗಳಲ್ಲಿ ಕೆಲಸ ಸಿಕ್ಕುವುದು ಅಪರೂಪ. ಆದ್ದರಿಂದ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ನಮ್ಮ ಕಡೂರು ತಾಲ್ಲೂಕಿನಲ್ಲಿ ಒಂದು ತೆಂಗಿನ ನಾರಿನ ಮತ್ತು ಗುಂಡಿಯ ಕಾರ್ಖಾನೆಯನ್ನು ಏರ್ಪಾಡುಮಾಡ ಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಹೆಚ್ಚು ಮಟ್ಟದಲ್ಲಿ ತೆಂಗಿನ ವ್ಯವಸಾಯ ನಡೆಯುತ್ತಿದ್ದರೂ ಹಗ್ಗವನ್ನು ವಾಲಂಬಾಡಿಯಿಂದ ತರಿಸುತ್ತಿದ್ದಾರೆ.

ನಮ್ಮ ಜಿಲ್ಲೆಯಲ್ಲಿ ನೀರಿನ ಅನುಕೂಲತೆ ಬೇಕಾದಷ್ಟಿದೆ. ಬೇಕಾದ ಹಾಗೆ ನದಿಗಳಿವೆ. ಆದುದರಿಂದ ನಮ್ಮ ಕಡೂರು ಜಿಲ್ಲೆಯಲ್ಲಿ ಸರ್ಕಾರದವರು ಒಂದು ತೆಂಗಿನ ನಾರಿನ ಕೈಗಾರಿಕೆಯ ಕಾರ್ಖಾನೆಯನ್ನು ಸ್ಥಾಪಿಸಿ ಅಲ್ಲಿಯ ಜನಗಳಿಗೆ ಅನುಕೂಲಮಾಡಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

2 P.M.

*ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಸ್ವಾಮಿ, ನಮ್ಮ ಮೈಸೂರು ಸರ್ಕಾರ ಇದುವರೆಗೆ ಈ ನಾನಾ ವಿಧವಾದ ಎಲ್ಲಾ ಕೈಗಾರಿಕೆಗಳ ಮೇಲೆಯೂ ಹಾಕಿರತಕ್ಕ ಬಂಡವಾಳ ಸುಮಾರು ಎಂಟು ಕೋಟಿ 11 ಲಕ್ಷದವರೆಗೂ ಹೋಗಿದೆ. ಆದರೆ ಈ ಬಾಬುಗಳಿಂದ ಬರತಕ್ಕಂಥ ಫಾಯಿದೆಯೇನೆಂಬುದನ್ನು ಲೆಕ್ಕ ಹಾಕಿ ನೋಡಿದರೆ ಅದಕ್ಕೆ ಶೇಕಡ ಒಂದೂವರೆಯಷ್ಟು ಬಡ್ಡಿ ಮಾತ್ರ ಬರುತ್ತಿದೆಯೆಂದು ಹೇಳಬಹುದು. ಹೀಗೆ ನಮ್ಮ ಸಂಸ್ಥಾನದ ಕೈಗಾರಿಕೆಗಳಿಂದ ತೀರ ಕಡಮೆ ಪರ್ಸೆಂಟೇಜಿನಲ್ಲಿ ಉತ್ಪತ್ತಿ ಬರುತ್ತಿರುವುದನ್ನು ನೋಡಿದರೆ ನಮ್ಮ ಕೇಂದ್ರ ಸರ್ಕಾರದವರು ಆ ಸೋಷಿಯಲಿಸ್ಟಿಕ್ ಪ್ಯಾಟರನ್ ಸೊಸೈಟಿ ಎಂದು ಯಾವುದನ್ನು ಜಾರಿಗೆ ತರುತ್ತೇವೆಂದು ಕೇಳುತ್ತಿದ್ದಾರೆಯೋ ಅದನ್ನು ಈಗಾಗಲೇ ನಮ್ಮ ಮೈಸೂರು ಸರ್ಕಾರದವರು ಜಾರಿಗೆ ತಂದುಬಿಟ್ಟಿದ್ದಾರೆ ಎಂದು ಹೇಳಿದರೆ ಅದೇನೂ ಅಷ್ಟು ತಪ್ಪಾಗಲಾರದೆಂದು ನಾನು ಭಾವಿಸಿದ್ದೇನೆ.

ಅಧ್ಯಕ್ಷರು.—ಆ ದುಡ್ಡನ್ನೆಲ್ಲಾ ಜನರಿಗೆ ಹಂಚಿಬಿಟ್ಟಿದ್ದಾರೆಂತಲೇ?

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಇಲ್ಲಿಯತನಕ ನಮಗೆ ಈ ಕೈಗಾರಿಕಾ ಸಂಸ್ಥೆಗಳಿಂದ ಬರತಕ್ಕಂಥ ಲಾಭ ಇಷ್ಟೊಂದು ಕಡಮೆಯಾಗಿರುವುದನ್ನು ನೋಡಿದರೆ ನಮ್ಮ ಸಂಸ್ಥಾನದಲ್ಲಿ ಈಗಾಗಲೇ ಆ ಸೋಷಿಯಲಿಸ್ಟಿಕ್ ಪ್ಯಾಟರನ್ ಸೊಸೈಟಿಯನ್ನು ಜಾರಿಗೆ ತಂದಿದ್ದಾರೆಂದು ಕಂಡು ಬರುವಂತಿದೆ.

ಇನ್ನು ನಮ್ಮ ಬೆಂಗಳೂರಿನಲ್ಲಿ ಈ ದಿವಸ ನಡೆಸಲ್ಪಡುತ್ತಿರುವಂಥ ಅನೇಕ ಕೈಗಾರಿಕಾ ಸಂಸ್ಥೆಗಳೆಲ್ಲ ಹೊರಗಡೆಯ ಸಂಸ್ಥಾನಗಳವರಿಂದ ಸ್ಥಾಪಿಸಲ್ಪಟ್ಟಂಥವು. ಹೀಗೆ ಹೊರಗಡೆಯಿಂದ ಬಂದು ಇಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸತಕ್ಕವರಿಗೆ ನಮ್ಮ ಸರ್ಕಾರದವರು ಜಮೀನು, ಎಲೆಕ್ಟ್ರಿಸಿಟಿ ಇತ್ಯಾದಿ ಅನೇಕ ಸೌಕರ್ಯಗಳನ್ನು ಒದಗಿಸಿಕೊಡುತ್ತಿದ್ದಾರೆ. ಇಷ್ಟೆಲ್ಲಾ ಅನುಕೂಲತೆಗಳನ್ನು ಸರ್ಕಾರದವರು ಅವರಿಗೆ ಕಲ್ಪಿಸಿಕೊಟ್ಟಾಗ್ಯೂ ಆ ಕೈಗಾರಿಕಾ ಸಂಸ್ಥೆಗಳಿಂದ ನಮ್ಮ ದೇಶಕ್ಕೂ ಮತ್ತು ನಮ್ಮ ಜನಗಳಿಗೂ ಏನೂ ಪ್ರಯೋಜನವಿರುವುದಿಲ್ಲ. ಈ ಕಾರ್ಖಾನೆಗಳೆಲ್ಲಾ ಈ ದಿವಸ ಕೆಲಸ ಮಾಡುತ್ತಿರುವ ಜನರು ಹೊರಗಡೆಯವರು. ನಮ್ಮ ದೇಶದ ಜನರಿಗೆ ಈ ಸಂಸ್ಥೆಗಳಲ್ಲಿ ಯಾವ ಉದ್ಯೋಗಗಳನ್ನೂ ಕೊಡುತ್ತಿಲ್ಲ. ಹೀಗೆ ನಮ್ಮ ಸರ್ಕಾರದವರು ಎಷ್ಟೋ ಅನುಕೂಲತೆಗಳನ್ನು ಒದಗಿಸಿಕೊಟ್ಟಿದ್ದರೂ ಅವರು ಆ ಕಾರ್ಖಾನೆಯ ಉದ್ಯೋಗಗಳನ್ನೆಲ್ಲಾ ಬೇರೆ ದೇಶದಿಂದ ಬಂದಂಥವರಿಗೆ ಕೊಡುತ್ತಿದ್ದಾರೆಯೇ ಹೊರತು ನಮ್ಮ ದೇಶದ ಜನರಿಗೆ ಯಾವ ಉದ್ಯೋಗಗಳನ್ನೂ ಕೊಡುತ್ತಿಲ್ಲ. ಆದುದರಿಂದ ಸರ್ಕಾರದವರು ಇನ್ನು ಮುಂದಾದರೂ ಹೀಗೆ ಪ್ರಾರಂಭವಾಗತಕ್ಕಂಥ ಹೊಸ ಕಾರ್ಖಾನೆಗಳಲ್ಲಿ ಒಂದು ಕಡ್ಡಾಯವಾದ ಕಾನೂನನ್ನೇ ಜಾರಿಗೆ ತಂದು ಅವರು ಕನಿಷ್ಟ ಪಕ್ಷ ಶೇಕಡ 50ರಷ್ಟು ಉದ್ಯೋಗಗಳನ್ನಾದರೂ ನಮ್ಮ ದೇಶದ ಜನರಿಗೆ ಕೊಟ್ಟೇತೀರಬೇಕೆಂಬ ನಿರ್ಬಂಧವನ್ನು ಹಾಕಬೇಕೆಂದು ಹೇಳುತ್ತೇನೆ. ಈ ಬಗ್ಗೆ ಅಗತ್ಯವಾಗಿ ಬೇಕಾದಂಥ ಒಂದು ಕಾನೂನನ್ನು ಸಹ ಕಡ್ಡಾಯವಾಗಿ ಜಾರಿಗೆ ತರಬೇಕೆಂದು ಹೇಳುತ್ತೇನೆ. ಹೀಗೆ ತಾವು ಮಾಡಿದರೆ ಆಗ ನಮ್ಮ ದೇಶದ ಜನರಿಗೆ ಸ್ವಲ್ಪ ಅನುಕೂಲ ಮಾಡಿದ ಹಾಗೆ ಆಗುತ್ತದೆಯೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ನಮ್ಮ ಸರ್ಕಾರದವರು ಈಗಾಗಲೇ ಅನೇಕ ವರ್ಷಗಳಿಂದಲೂ ಅನೇಕ ರೀತಿಯ ಗ್ರಾಮ ಕೈಗಾರಿಕೆಗಳನ್ನು ಕೈಗೊಂಡಿರುತ್ತಾರೆ. ಇಷ್ಟು ವರ್ಷಗಳಾದರೂ ಇವರು ಅವುಗಳನ್ನೆಲ್ಲಾ ಇನ್ನೂ ಒಂದು ಡೆಮಾನ್ಸ್ಟ್ರೇಷನ್ ಸ್ಟೇಜಿನಲ್ಲೇ ಇಟ್ಟುಕೊಂಡು ಬರುತ್ತಿರುವಂತೆ ಕಂಡು ಬರುತ್ತಿದೆ. ಬದನವಾಳದಲ್ಲಿ ಖಾದಿ ಕೇಂದ್ರವನ್ನು ಸ್ಥಾಪಿಸಿ ಇಲ್ಲಿಗೆ 25 ವರ್ಷಗಳ ಮೇಲಾಯಿತು. ಆದರೆ ಅದನ್ನಿನ್ನೂ ಎಕ್ಸ್‌ಪೆರಿಮೆಂಟಲ್ ಫಾರಂ ಎಂತಲೇ ಕರೆಯುತ್ತಿದ್ದಾರೆ. ಅದನ್ನಿನ್ನೂ ಖಾಯಂ ಮಾಡಿಲ್ಲ ಆದುದರಿಂದ ಈಗಲಾದರೂ ಅದನ್ನು ಒಂದು ಖಾಯಂ ಖಾದಿ ಸಂಸ್ಥೆಯನ್ನಾಗಿ ಮಾಡಬೇಕೆಂದು ಹೇಳುತ್ತೇನೆ. ಇಲ್ಲಿಯ ತನಕ ತಾವು ಇದಕ್ಕೆ ಸಾಕಷ್ಟು ನಿಗಾ ಕೊಟ್ಟಿರುವುದಿಲ್ಲ. ಆದುದರಿಂದ ಈಗಲಾದರೂ ತಾವು ಸಾಕಷ್ಟು ಮೂಲ ಬಂಡವಾಳವನ್ನು ಹಾಕಿ ಇದನ್ನು ಖಾಯಂ ಮಾಡಬೇಕೆಂದು ಹೇಳುತ್ತೇನೆ. ಇದರಿಂದ ತಮಗೇನೂ ನಷ್ಟವಾಗುವುದಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರದವರು ಬೇರೆ ಸಬ್‌ಸಿಡಿಯನ್ನು ಕೊಡುತ್ತಿದ್ದಾರೆ. ಆದರೆ ಮೈಸೂರು ಸರ್ಕಾರದವರು ಇದಕ್ಕೆ ಕೇವಲ ಒಂದು ತೋರುಗಾಣಿಯ ಸಹಾಯ ಮಾತ್ರ ಮಾಡುತ್ತಿರುವ ಹಾಗೆ ಕಾಣುತ್ತಿದೆ. ಆದುದರಿಂದ ಈಗಲಾದರೂ ಸರ್ಕಾರದವರು ಇದರ ಮೂಲ ಬಂಡವಾಳವನ್ನು ಜಾಸ್ತಿಮಾಡಿ ಆಲ್ ಇಂಡಿಯಾ ಖಾದಿ ಇಂಡಸ್ಟ್ರಿಯಲ್ ಬೋರ್ಡಿನವರು ಕೊಡತಕ್ಕಂಥ ಸಲಹೆಯ ಮೇರೆಗೆ ಇದನ್ನು ತಾವು ಮಾರ್ಪಾಡು ಮಾಡಬೇಕೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು.—ನೀವೂ ಕೂಡ ಆ ಖಾದಿ ಬೋರ್ಡಿನಲ್ಲೇ ಇದ್ದೀರಿ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ನಾನಿರತಕ್ಕದ್ದು ಬರಿ ಒಂದು ಅಡ್ವೈಜರಿ ಬೋರ್ಡು. ಸ್ಯಾಚುಟರಿ ಬೋರ್ಡಿನಲ್ಲಿಲ್ಲ.

ಇನ್ನು ಈಗ ನಮ್ಮ ಶಿವಮೊಗ್ಗ ಮತ್ತು ಮೈಸೂರು ಸಿಟಿ ಈ ಎರಡು ಕಡೆಗಳಲ್ಲಿ ಗಂಧದ ಎಣ್ಣೆಯನ್ನು ತಯಾರುಮಾಡುತ್ತಿದ್ದಾರೆ. ಇಲ್ಲಿಯತನಕ ಶಿವಮೊಗ್ಗಾದಲ್ಲಿ ಈ ಗಂಧದ ಎಣ್ಣೆ ಬಹಳ ಕಮ್ಮಿ ಖರ್ಚಿನಲ್ಲೇ ತಯಾರಾಗುತ್ತಿತ್ತು. ಈಗ ಅದನ್ನು ಶುದ್ಧಿ ಮಾಡುವುದಕ್ಕೆಂದು ಹೇಳಿ ಮೈಸೂರಿಗೆ ತರಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ಈ ದಿವಸ ಜನರು ಅದರ ಖರೀದಿ ಬಹಳ ಜಾಸ್ತಿಯೆಂದು ಹೇಳುತ್ತಿದ್ದಾರೆ. ಹೀಗೆ ಈಗ ಗಂಧದ ಎಣ್ಣೆಗೆ ಸಾಕಷ್ಟು ಗಿರಾಕಿಯಿಲ್ಲದೆ ಆ ಕಾರ್ಖಾನೆಯನ್ನು ಮುಚ್ಚುವಂಥ ಸ್ಥಿತಿಗೆ ಬಂದಿದೆ. ಇಲ್ಲಿಯವರೆಗೂ ಶಿವಮೊಗ್ಗಾದಲ್ಲಿ ತಯಾರಿಸಲಾಗುತ್ತಿದ್ದಂಥ ಗಂಧದ ಎಣ್ಣೆ ಬಹಳ ಉತ್ತಮವಾದದ್ದು ಮತ್ತು ಶ್ರೇಷ್ಠವಾದುದೆಂದು ಇಡೀ ಇಂಡಿಯಾ ದೇಶದಲ್ಲೆಲ್ಲಾ ಬಹಳ ಹೆಸರುವಾಸಿ ಪಡೆದಿತ್ತು. ಈ ಬಗ್ಗೆ ಅದು ಅನೇಕ ಸರ್ಟಿಫಿಕೇಟುಗಳನ್ನೂ ಸಹ ಪಡೆದುಕೊಂಡಿದೆ. ಹೀಗಿರುವಾಗ ನಮ್ಮ ಸರ್ಕಾರದವರು ಈ ದಿವಸ ಆ ಮೈಸೂರಿನಲ್ಲಿರುವಂಥ ಗಂಧದ ಕಾರ್ಖಾನೆಗೆ ನಾಲ್ಕು ಲಕ್ಷ ರೂಪಾಯಿಗಳನ್ನೊದಗಿಸಿದ್ದು ನಮ್ಮ ಶಿವಮೊಗ್ಗಾದಲ್ಲಿರುವ ಗಂಧದ ಕಾರ್ಖಾನೆಗೆ ಒಂದು ಕಾಸನ್ನೂ ಸಹ ಒದಗಿಸಿಲ್ಲ. ಈ ಗಂಧದ ಮರಗಳು ಹೆಚ್ಚಾಗಿ ಬೆಳೆಯುತ್ತಿರುವುದು ನಮ್ಮ ಆ ಶಿವಮೊಗ್ಗಾ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿ. ಈಗ ಆ ಶಿವಮೊಗ್ಗಾ ಕಾರ್ಖಾನೆಯಲ್ಲಿ ಗಂಧದ ಚೆಕ್ಕೆಯಿಂದ ಎಣ್ಣೆಯನ್ನು ತೆಗೆಯಬೇಕೆಂದು ಹೇಳಿ ಅಲ್ಲಿಗೆ ಕೇವಲ ಗಂಧದ ಮರಗಳನ್ನು ಕೆತ್ತಿದ ಚೆಕ್ಕೆಯನ್ನು ಒದಗಿಸಿ, ಉಳ್ಳಿಳ್ಳಿಯ ಗಂಧದ ಮರಗಳನ್ನು ಮೈಸೂರಿಗೆ ಸಾಗಿಸುತ್ತಿದ್ದಾರೆ. ಆದರೆ ಶಿವಮೊಗ್ಗಿಯಲ್ಲಿ ಪ್ರಕೃತಿ ಸೌಂದರ್ಯ ಹೆಚ್ಚಾಗಿದೆ. ಉತ್ತಮವಾದ ಎಣ್ಣೆಯನ್ನು ತಯಾರಿಸಲಕ್ಕೆ ಅಲ್ಲಿ ಹೆಚ್ಚು ಅನಕೂಲವಿದೆ. ಆದುದರಿಂದ ಶಿವಮೊಗ್ಗಾದಲ್ಲಿರತಕ್ಕಂಥ ಗಂಧದ ಕಾರ್ಖಾನೆಗೆ ತಾವು ಹೆಚ್ಚಿನ ಪ್ರೋತ್ಸಾಹ ನೀಡಿ ಅಲ್ಲಿಯ ಜನಗಳಿಗೆ ಅನುಕೂಲ ಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಭದ್ರಾವತಿ ಕಾರ್ಖಾನೆಗಳಿಂದ ಹೊರಡತಕ್ಕಂಥ ಕೆಟ್ಟ ನೀರನ್ನು ಭದ್ರಾ ನದಿಗೆ ನೇರವಾಗಿ ಬಿಟ್ಟುಬಿಡುತ್ತಿರುವುದರಿಂದ ಭದ್ರಾವತಿಯ ಮತ್ತು ಆ ಸುತ್ತಮುತ್ತಲಿನ ಜನರಿಗೆ ಆರೋಗ್ಯ ಕೆಟ್ಟುಹೋಗುತ್ತಿದೆಯೆಂಬುದಾಗಿ ಈಗ ತಾನೆ ಶ್ರೀ ಮಾಧವಾಚಾರ್ ಅವರು ತಿಳಿಸಿದರು. ಆದರೆ ಈ ಕೊಳೆ ನೀರನ್ನು ಆ ನದಿಗೆ ಬಿಡುವುದಕ್ಕೆ ಬದಲಾಗಿ ಆ ನೀರನ್ನು ಸಿಲ್ಟ್ ಮಾಡಿ—ಅದರಿಂದ ರೈತರಿಗೆ ಬೇಕಾದಂಥ ಒಂದು ಬಗೆಯ ಉತ್ತಮ ಗೊಬ್ಬರವನ್ನು ತಯಾರಿಸಬಹುದೆಂದೂ, ಹೀಗೆ ಮಾಡಲು ಸಾಧ್ಯವಿದೆಯೆಂದೂ ಕೆಮಿಸ್ಟ್‌ಗಳು ಹೇಳುತ್ತಿದ್ದಾರೆ. ಅದನ್ನು ಈಗ ಪರಿಶೀಲನೆ ಮಾಡಬೇಕಾಗಿದೆ. ಈ ದಿವಸ ಈ ಕೈಗಾರಿಕೆಗಳನ್ನೆಲ್ಲಾ ಒಂದೇ ಕಡೆ ಪ್ರಾರಂಭಮಾಡುತ್ತಿದ್ದೀರಿ. ಇದು ಸರಿಯಾದದ್ದಲ್ಲ. ಇನ್ನು ಮುಂದಕ್ಕಾದರೂ ಸಹ ತಾವು ಪ್ರತಿಯೊಂದು ಜಿಲ್ಲೆಗೂ ಒಂದೊಂದು ಕೈಗಾರಿಕೆಯನ್ನು ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಇನ್ನು ವಿದ್ಯುಚ್ಛಕ್ತಿಯ ತಯಾರಿಕೆಯ ಬಗ್ಗೆ ಹೊನ್ನೇಮರಡು ಯೋಜನೆಯೊಂದು ಹಾಗೆಯೇ ಉಳಿದಿದೆ. ಈಗಾಗಲೇ ಜೋಗಿನಲ್ಲರತಕ್ಕಂಥ ಹೈಡ್ರೋ ಎರೆಕ್ಟ್ರಿಕ್ ಪ್ರಾಜೆಕ್ಟಿನಿಂದ 25 ಸಾವಿರ ಕಿಲೋ ವಾಟ್ಸ್‌ಗಳ ಪವರನ್ನು ತಯಾರಿಸುತ್ತಿದ್ದೀರಿ. ಈ ದೃಷ್ಟಿಯಿಂದ ಶಿವಮೊಗ್ಗಾದಲ್ಲಿ ಒಂದು ಯಾವ ದಾದರೂ ಹೊಸ ಕೈಗಾರಿಕೆಯ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಹೇಳುತ್ತೇನೆ.

*ಶ್ರೀ ಬಿ. ಸಿ. ನಂಜುಂಡಯ್ಯ (ಕೋರಾ)—ಸ್ವಾಮಿ, ನಾನೀಗ ಖಾದಿ ಕೈಗಾರಿಕೆಯ ಬಗ್ಗೆ ಒಂದೆರಡು ಮಾತುಗಳನ್ನಾಡಬೇಕೆಂದು ನಿಂತಿದ್ದೇನೆ. ಶ್ರೀ ಎಸ್. ಆರ್. ನಾಗಪ್ಪಶೆಟ್ಟಿಯವರು ಈ ಖಾದೀ ಅಭಿವೃದ್ಧಿಯ ಬಗ್ಗೆ ಏನಾದರೂ ಖಚಿತವಾದಂಥ ಸಲಹೆಗಳನ್ನು ಕೊಡುತ್ತಾರೆಂದು ನಾನು ಭಾವಿಸಿದ್ದೆ. ಆದರೆ ಅವರು ಹಾಗೆ ಯಾವ ಒಂದು ಖಚಿತವಾದ ಸಲಹೆಯನ್ನೂ ಸರ್ಕಾರಕ್ಕೆ ಕೊಟ್ಟಹಾಗೆ ಕಾಣಲಿಲ್ಲ. ಈ ಇಡೀ ಹಿಂದೂಸ್ಥಾನದಲ್ಲೇ ಈ ಖಾದಿ ಕೈಗಾರಿಕಾ ಕೇಂದ್ರವನ್ನು ಸ್ಥಾಪಿಸಿದವರಲ್ಲಿ ಮೈಸೂರಿನವರೇ ಮೊಟ್ಟಮೊದಲನೆಯವರೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಮೈಸೂರು ಸರ್ಕಾರದವರು ಈ ಖಾದೀ ಪ್ರಚಾರ ಕಾರ್ಯವನ್ನು ಕೈಗೊಂಡು, ಖಾದೀ ತಯಾರುಮಾಡುವುದಕ್ಕೆ ಪ್ರಾರಂಭಮಾಡಿ ಇಲ್ಲಿಗೆ ನುಮಾರು 25 ವರ್ಷಗಳ ಮೇಲಾಗುತ್ತದೆ. ಆದಾಗ್ಯೂ ಈ ದಿವಸ ನಮಗೆ ಕೊಡಲು ನಯವಾದ ಖಾದಿ ಇಲ್ಲ ದೊರೆಯುತ್ತಿಲ್ಲ. ಆಂಧ್ರನಾಡು ಇತ್ಯಾದಿ ಬೇರೆ ಸ್ಥಳಗಳಿಂದ ಅದನ್ನು ತರಿಸಿಕೊಳ್ಳಬೇಕಾಗಿದೆ. ಹಾಗೆ ಹೊರಗಡೆಯಿಂದ ಬರತಕ್ಕಂಥ ನಯವಾದ ಖಾದಿಯೇ ನಮ್ಮಲ್ಲಿ ಈ ದಿವಸ ಸಿಕ್ಕುತ್ತಿಲ್ಲ. ಅದಕ್ಕೆ ಕಾರಣವೇನು ಎಂಬುದನ್ನು ನಾವೀಗ ಪರಿಶೀಲನೆ ಮಾಡಬೇಕಾಗಿದೆ. ನಮ್ಮಲ್ಲಿ ಈ ಖಾದಿ ಕ್ವಾಲಿಟಿಯನ್ನು ಹೆಚ್ಚಿನತಕ್ಕ ಬಗ್ಗೆ ಅಷ್ಟಾಗಿ ಗಮನವನ್ನೇ ಕೊಟ್ಟಿಲ್ಲ. ಏನೋ ಒಂದು ಖಾದಿ ಬಟ್ಟೆಹಾಕಿಕೊಳ್ಳಬೇಕು ಅದಕ್ಕೆ ಎಂಥದನ್ನಾದರೂ ಹಾಕಿಕೊಳ್ಳೋಣ ಎನ್ನತಕ್ಕಂಥಕಾಲ ಹೋಯಿತು. ನಯವಾದ ಖಾದಿ ಇಲ್ಲದಿದ್ದರೆ ಅದನ್ನು ಜನರು ಹಾಕಲು ಇಷ್ಟಪಡುತ್ತಿಲ್ಲ. ಈ ದಿವಸ ನಮ್ಮಲ್ಲಿ ಅಂಥ ಉತ್ತಮ ಖಾದಿಯನ್ನು ತಯಾರಿಸದೆ ಇರುವುದಕ್ಕೆ ಮುಖ್ಯ ಕಾರಣ ಯಾವುದೆಂದರೆ—ಈ ಖಾದೀ ತಯಾರುಮಾಡತಕ್ಕಂಥವರಿಗೆ ಸಾಕಷ್ಟು ಪ್ರೋತ್ಸಾಹವನ್ನು ಯಾರೂ ನೀಡುತ್ತಿಲ್ಲ. ಅವರಿಗೆ ತಿಂಗಳಿಗೆ 20, 25 ರೂಪಾಯಿಗಳ ನಂಬಳ ಮಾತ್ರ ಕೊಡುತ್ತಿದ್ದಾರೆ. ಹೀಗಾಗಿ 20, 25 ವರ್ಷಗಳಿಂದಲೂ ಈ ಖಾದಿ ಕೈಗಾರಿಕೆಯಲ್ಲಿ ತೊಡಗಿರತಕ್ಕಂಥ ಜನರಿಗೆ ಯಾವ ಪ್ರೋತ್ಸಾಹವೂ ದೊರೆಯದೆ ಹೋಗಿ ಈ ದಿವಸ ನಮಗೆ ಈ ತೊಂದರೆಯುಂಟಾಗಿದೆ. ಆದರೆ ಇಷ್ಟಯವರೆಗೂ ಇವರು ತ್ಯಾಗಕ್ಕಾಗಿ ಈ ಕೆಲಸದಲ್ಲಿ ತೊಡಗಿದ್ದಾರೆಂದು ಹೇಳಬೇಕಾಗಿದೆ. ಈ ದಿವಸ ಈ ಕೈಗಾರಿಕೆಯಲ್ಲಿ 25 ಸಾವಿರ ಜನರು ತೊಡಗಿದ್ದಾರೆ. ಅವರಿಗೆ ಸಾಕಷ್ಟು ಉತ್ಪ್ರೇಜನವಿಲ್ಲ. ಈ ದಿವಸ ತಾವು ಈ ಖಾದಿ ಸಂಸ್ಥೆಗಳ ಮೇಲ್ವಿಚಾರಣೆಯನ್ನು ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಇಲಾಖೆಗೆ ವಹಿಸಿದ್ದೀರಿ. ಈ ಇಲಾಖೆಯ ಹಿಡಿತದಿಂದ ಇದನ್ನು ತಪ್ಪಿಸಿ ಇದಕ್ಕೇ ಒಂದು ಪ್ರತ್ಯೇಕ ಇಲಾಖೆಯನ್ನೇರ್ಪಡಿಸಬೇಕೆಂದು ಹೇಳುತ್ತೇನೆ. ಹೀಗೆಯೇ ಈ ಬಾಬು ಈ ಚೆಕ್ಸ್‌ಟೈಲ್ಸ್ ಇಲಾಖೆಯವರ ಕೈಲಿದ್ದರೆ ಮುಂದೆ ಬಹಳ ಕಷ್ಟಕ್ಕೀಡಾಗಬೇಕಾಗುತ್ತದೆ. ಏತಕ್ಕೆಂದರೆ ಈ ಚೆಕ್ಸ್‌ಟೈಲ್ಸ್ ಇಲಾಖೆಯು ಯಾವ ರೀತಿ ಕೆಲಸ ಕಾರ್ಯಗಳನ್ನು ನಡೆಸುತ್ತಿದೆಯೆಂಬುದನ್ನು ಮೊನ್ನೆ ಕಳೆದ ಕಂಟ್ರೋಲ್ ಕಾಲದಲ್ಲಿ ನೋಡಿದ್ದೇವೆ. ಇನ್ನು ಈ ಖಾದೀ ಕೆಲಸಗಾರರಿಗೆ ತಾವು 20—25 ರೂಪಾಯಿಗಳ ನಂಬಳ ಕೊಟ್ಟರೆ ಸಾಲದು. ಇವರು ಇಲ್ಲಿಯವರೆಗೂ ಒಂದು ತ್ಯಾಗ ಕ್ಕಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಇವರಿಗೆ ತಾವು ಒಂದು ನರಿಯಾದ ಗ್ರೇಡನ್ನು ಕೊಟ್ಟರೆ ಆಗ ಅವರಿಂದ ಒಳ್ಳೆಯ ಕೆಲಸಗಳು ನಡೆಯಲು ಅವಕಾಶವಾಗುತ್ತದೆ. ಅಂತೂ ಈ ಸಂಸ್ಥೆಯನ್ನು ಈ

(ಶ್ರೀ ಬಿ. ಸಿ. ನಂಜುಂಡಯ್ಯ.)

ಚೆಕ್‌ಸ್ಟೈಲ್ ಸೂಪರ್‌ವೈಜರುಗಳ ನಿಗಾವಣೆಯಿಂದ ತಪ್ಪಿಸದೆ ಹೋದರೆ ಈ ಕೈಗಾರಿಕೆ ಮುಂದೆ ಖಂಡಿತವಾಗಿ ಹಾಳಾಗಿ ಹೋಗುತ್ತದೆಂದು ಹೇಳುತ್ತೇನೆ.

